ಖಂಡ 1 ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ. ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು.

(ಮೊದಲನೇ ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ ಮಂತ್ರಿಗಳು).—೧೯೮೮ನೇ ಇಸವಿಯ ಕರ್ನಾಟಕ ತೆರಿಗೆ ಶಾಸನಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.— ಪ್ರಸ್ತಾವ ಏನೆಂದರೆ. '' ೧೯೮೮ನೇ ಇಸವಿಯ ಕರ್ನಾಟಕ ತೆರಿಗೆ ಶಾಸನಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಂಸೂದೆಗೆ ಒಪ್ಪಿಗೆ ನೀಡಲಾಯಿತು

೬೦ನೇ ನಿಯಮದ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ.

ಬೆಂಗಳೂರಿನಲ್ಲಿ ಹಾಗೂ ರಾಜ್ಯದ ಇತರೆ ಕಡೆಗಳಲ್ಲಿ ಇತ್ತೀಚೆಗೆ ಬಿದ್ದ ಭಾರಿ ಮಳೆಯಿಂದಾಗಿ ಸಾರ್ವಜನಿಕರ ಆಸ್ತಿ–ಪಾಸ್ತಿ ಹಾಗೂ ಜೀವಕ್ಕೆ ಉಂಟಾದ ಭಾರೀ ಅನಾಹುತದ ಬಗ್ಗೆ.

ಅಧ್ಯಕ್ಷರು.—ಈಗ ವಿರೋಧ ಪಕ್ಷದ ನಾಯಕಿಯವರಾದ ಶ್ರೀಮತಿ ನಾಗರತ್ನಮ್ಮನವರು ಮಾತನಾಡುತ್ತಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಯಾರು ಇದ್ದಾರೆ ?

ಶ್ರೀ ಆರ್. ವೆಂಕಟರಾಮಯ್ಯ.—ದೇವೇಗೌಡರು ಬಂದರು ಒಳ್ಳೆಯದು. ಜಾಸ್ತಿ ಕೆಲಸವನ್ನು ಅವರೇ ತೆಗೆದುಕೊಳ್ಳಬೇಕಾಗುತ್ತದೆ. ಅವರು ಬಂದರೆ ಹೆಚ್ಚು ಸಹಾಯಕವಾಗುತ್ತದೆ. ನಾವು ಹೇಳುವುದನ್ನು ಅವರು ಅರ್ಥ ಮಾಡಿಕೊಳ್ಳುತ್ತಾರೆ. ಇದರಿಂದ ಹೆಚ್ಚು ಸಹಕಾರಿಯಾಗುತ್ತದೆ.

ಶ್ರೀ ಆರ್ ವಿ. ದೇಶಪಾಂಡೆ.—ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟದ್ದು. ಬೆಂಗಳೂರು ನಗರಕ್ಕೆ ಸಂಬಂಧಪಟ್ಟದ್ದು ಆಗಿದ್ದರೆ ನಾನೇ ಉತ್ತರ ಹೇಳುತ್ತಿದ್ದೆ.

ಶ್ರೀ ಎಂ. ಪಿ. ಪ್ರಕಾಶ್.—ಚರ್ಚೆಯನ್ನು ಪ್ರಾರಂಭ ಮಾಡಲಿ.

ಅಧ್ಯಕ್ಷರು.—ಆಯಿತು. ಪ್ರಾರಂಭ ಮಾಡಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ಫ್ಲಡ್ ಬಗ್ಗೆ ಆಗಲಿ, ಬರಗಾಲದ ಬಗ್ಗೆ ಆಗಲಿ ನಾವು ಹೇಳುವಾಗ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತಿ ರಾಜ್ ಮಂತ್ರಿಗಳು ಕೃಷಿಯ ಮಂತ್ರಿಗಳು ಹಾಗೂ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಇಲ್ಲಿ ಇರಬೇಕಾಗುತ್ತದೆ. ಇದರಿಂದಾಗಿ ಮಾನ್ಯ ಸದಸ್ಯರು ಹೇಳುವಂತಹದ್ದನ್ನು ಗಮನದಲ್ಲಿಟ್ಟುಕೊಂಡು ಅಂತಹ ಕಡೆ ರಿಪೇರಿ ಕೆಲಸಗಳನ್ನು ಹಾಗೂ ಇನ್ನಿತರೆ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಹೆಚ್ಚು ಸಹಾಯಕವಾಗುತ್ತದೆ. ಇಲ್ಲದಿದ್ದರೆ

ಇದೂ ಕೂಡ ಸಿಸಿಲರ ಕೆಳಗೆ ಚರ್ಚೆ ಮಾಡಿದ ಹಾಗೆ ಆಗುತ್ತದೆ. ಇದರಿಂದ ಆಗುವ ಉಪಯೋಗ ವೇನು ?

ಶ್ರೀ ಎಂ. ಪಿ. ಪ್ರಕಾಶ್.—ಈಗ ಚರ್ಚೆಯನ್ನು ಪ್ರಾರಂಭ ಮಾಡಲಿ. ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳೇ ಉತ್ತರವನ್ನು ಕೊಡುತ್ತಾರೆ. ಉತ್ತರ ಕೂಡ ರೆಡಿಯಾಗಿದೆ. ನಾನೇ ಓದಬಹುದಂ ಹಾಗೂ ಉತ್ತರವನ್ನು ಕೊಡಬಹುದು. ಆದರೆ ಸನ್ಮಾನ್ಯ ವಿರೋಧಪಕ್ಷದ ನಾಯಕಿಯವರು ಹೇಳಿದ ಹಾಗೆ ಮುಖ್ಯ ಮಂತ್ರಿಗಳೇ ಉತ್ತರ ಕೊಟ್ಟರೆ ಸರಿಹೋಗುತ್ತದೆ. ನಾಳೆ ಅವರು ಉತ್ತರ ಕೊಡು ತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.—ಕೇಳುವವರು ಯಾರು ?

ಶ್ರೀ ಎಂ. ಪಿ. ಪ್ರಕಾಶ್.—ನಾನು ಬರೆದುಕೊಳ್ಳುತ್ತೇನೆ.

† ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ವಿರೋಧ ಪಕ್ಷದ ನಾಯಕಿಯರು).—ಮಾನ್ಯ ಅಧ್ಯಕ್ಷರೇ, ನಾನು ಹೇಳುವುದೇನೆಂದರೆ, ಬಹಳಷ್ಟು ವರ್ಷಗಳಿಂದ ಆದರಲ್ಲೂ ನಾನು ಅನಾವೃಷ್ಟಿ, ಕ್ಷಾಮ–ದಾಮರಿಗಳಿಂದ ಕೂಡಿದಂತಹ ಭಾಗದಿಂದ ಬಂದಿರುವವಳು. ಬಹಳ ವರ್ಷಗಳಿಂದ ನಮ್ಮಲ್ಲಿ ಅನಾವೃಷ್ಟಿ ಇತ್ತು, ಕ್ಷಾಮ ಇತ್ತು, ಅದಕ್ಕೆ ಪರಿಹಾರ ಕೊಡಿ ಅಂತ ಸರ್ಕಾರವನ್ನು ಕೇಳುತ್ತಿದ್ದೆನು. ಆದರೆ ಈ ಸಾರಿ ಅತಿ ವೃಷ್ಟಿಯಿಂದ ಆಗಿರತಕ್ಕ ಅನಾಹುತಕ್ಕೆ ಪರಿಹಾರವನ್ನು ಕೊಡಬೇಕೆಂದಂ ಡಿಮ್ಯಾಂಡ್ ಮಾಡುವುದಕ್ಕೋಸ್ಕರ ಸರ್ಕಾರವನ್ನು ಕೇಳುವುದಕ್ಕೆ ನಿಂತಿದ್ದೇನೆ ಸರ್ಕಾರದವರು ಕೆಲವು ಮಾಹಿತಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಅದಕ್ಕಿಂತ ಮುಂಚಿತವಾಗಿ ಈ ಸರ್ಕಾರ ದವರು ಈ ಮೆನವಿ ಕೊಡುವುದಕ್ಕಿಂತ ಮುಂಚಿತವಾಗಿ ಮುಕ್ಕಾಲು ಭಾಗ ಇಡೀ ರಾಜ್ಯವನ್ನು ಸುತ್ತಾಡಿ ಬಂದಿದ್ದೇನೆ. ಆ ಬಗ್ಗೆ ನಾನು ಭಾಷಣ ಮಾಡುವುದು ಅನಾವಶ್ಯಕ ಅಂತ ಕಾಣುತ್ತದೆ. ಏಕೆಂದರೆ ಉತ್ತರ ಈಗಾಗಲೇ ರೆಡಿಯಾಗಿದೆ ಎಂದು ಮಂತ್ರಿಗಳು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಈ ಸರ್ಕಾರದಲ್ಲಿ ಪ್ರಶ್ನೆ ಕೇಳುವುದಕ್ಕೆ ಮೊದಲೇ ಉತ್ತರ ರೆಡಿಯಾಗಿರುತ್ತದೆ. ಮೊನ್ನೆ ಬೀದರ್ ಘಟನೆಯು ಬಗ್ಗೆಯೂ ಕೂಡ ಇದೇ ರೀತಿಯಾಯಿತು. ಗಮನ ಸೆಳೆಯುವ ಸೂಚನೆಯ ಮೇಲೆ ತಯಾರು ಮಾಡಿದಂತಹ ಉತ್ತರವನ್ನು ಇದಕ್ಕೂ ಓದಿದರು. ನಾವು ಹೇಳುವಂತಹದ್ದನ್ನು ಕೇಳಿಕೊಂಡು ಅದನ್ನು ನೋಟ್ ಮಾಡಿಕೊಂಡು ನಂತರ ಅದಕ್ಕೆ ವಿವರ ವಾದ ಉತ್ತರವನ್ನು ಹೇಳಿದರೆ ಸರಿಹೋಗುತ್ತದೆ. ಅದಂ ಬಿಟ್ಟು.....

ಅಧ್ಯಕ್ಷರು.—ಉತ್ತರ ಅಂದರೆ ಅಂಕಿ ಸಂಖ್ಯೆಗಳು ರೆಡಿಯಾಗಿವೆ ಅಂತ ಹೇಳಿದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ —ಏನು ಅಧ್ಯಕ್ಷರೇ, ಹೊಸದಾಗಿ ಬಂದವರನ್ನು ಆಟ ಆಡಿಸುವ ರೀತಿಯಲ್ಲಿ ನಮ್ಮನ್ನು ತಾವು ಆಡಿಸುತ್ತಿದ್ದೀರಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿರುವಂತಹ ವೈಮೊರಾಂಡಂನ ಪ್ರತಿ ನನ್ನ ಹತ್ತಿರ ಕೂಡ ಇದೆ. ಅಂದರೆ ಈ ಅಂಕಿ ಸಂಖ್ಯೆಗಳ ಆಧಾರದ ಮೇಲೆ ಮಾತನಾಡಬೇಕಾ ? ಇದಕ್ಕೆ ಏನು ಹೇಳಬೇಕು ? ಇವರ ಹತ್ತಿರ ಹೇಳಿ ಏನು ಪ್ರಯೋಜನ?

ಶ್ರೀ ಎಂ. ಪಿ. ಪ್ರಕಾಶ್.—ಉತ್ತರ ರೆಡಿ ಅಂದರೆ ಆ ತರಹದ ಅರ್ಥದಲ್ಲಿ ಅಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಜಿಲ್ಲಾ ಪರಿಷತ್ ಮಿನಿಸ್ಟರ್ ಇದ್ದರೆ ಹೇಳಬಹುದು. ಆದರೆ ಇವರು ಒರೀ ಉತ್ತರ ಕೊಡುವುದಕ್ಕಾಗಿ ಇದ್ದಾರೆ. ಮತ್ತೆ ಪಿ. ಡಬ್ಲ್ಯೂ. ಡಿ ಮಿನಿಸ್ಟರ್ ಇಲ್ಲ. ಅವರೆಲ್ಲರೂ ಇಲ್ಲದಿದ್ದ ಮೇಲೆ ಮಾತನಾಡುವುದು ಏಕೆ ? ಅದರಿಂದ ಪ್ರಯೋಜನ ಏನು ?

ಅಧ್ಯಕ್ಷರು.—ಆಯಿತಂ, ತಾವು ಪ್ರಾರಂಭ ಮಾಡಿ.

೪–೩೦ ಪಿ.ಎಂ.

ಶ್ರೀಮತಿ ಕೆ. ಎಸ್ ನಾಗರತ್ನಮ್ಮ.—ನಾನು ರಾಜ್ಯದ ಎಲ್ಲ ಕಡೆ ಸುತ್ತಾಡಿದಾಗ ಹಲವಾರು ವಿಚಾರಗಳನ್ನು ಜನರಿಂದ ತಿಳಿದುಕೊಂಡು, ಜನರಿಗೆ ಏನೇನು ತೊಂದರೆಗಳಾಗಿದೆ ಏನೇನು ಅನಾಹುತಗಳಾಗಿವೆ ಎನ್ನುವುದರ ಬಗ್ಗೆ ಸರ್ಕಾರಕ್ಕೆ ಕಾಗದವನ್ನು ಬರೆದಿದ್ದೇನೆ. ಎಷ್ಟು ವಿಚಾರಗಳನ್ನು

ತಿಳಿಸಿದ್ದೇನೆ. ಇದರ ಜೊತೆಗೆ ಇನ್ನೂ ಏನೇನು ಆಗಿದೆ ಎನ್ನುವ ಬಗ್ಗೆ ತಮ್ಮ ಗಮನಕ್ಕೆ ತರಲು ಈ ಸಂದರ್ಭದಲ್ಲಿ ಇಚ್ಛಿಸುತ್ತೇನೆ.

ಅಧ್ಯಕ್ಷರೇ, ಬಳ್ಳಾರಿಯಲ್ಲಿ ೨೬ನೇ ತಾರೀಖು ಆಗಸ್ಟ್ ಸಾಯಂಕಾಲ ವಿಪರೀತ ಮಳೆಯಾಗಿ ಒಂದು ದೊಡ್ಡ ಕಲ್ಲು ಕುಸಿದುಬಿದ್ದ ಬಗ್ಗೆ ಪೇಪರ್‌ನಲ್ಲಿಯೂ ಕೂಡ ರಿಪೋರ್ಟ್ ಬಂದಿರುತ್ತದೆ. ಆಗ ಸ್ಥಳದಲ್ಲಿಯೇ ಒಂದು ಮಗುವು ಸತ್ತಿದೆ. ೫–೬ ಜನರಿಗೆ ಗಾಯಗಳಾಗಿವೆ. ಅಲ್ಲಿ ಒಂದು ಒಳ್ಳೆಯ ರೋಡ್ ಇಲ್ಲ, ಎಲ್ಲ ರೋಡುಗಳು ಅನಾಹುತಕ್ಕೆ ಒಳಗಾಗಿವೆ. ಬಾಪೂಜಿನಗರದಲ್ಲಿ ೭ ವರ್ಷದ ಒಂದು ಹುಡುಗಿ ಸತ್ತುಹೋಗಿದ್ದಾಳೆ. ಶಾಪ್‌ಗಳೆಲ್ಲ ಡಿಸ್ಟ್ರಾಯ್ ಆಗಿದೆ. ಶಾರ್ಟ್ ಸರ್ಕೂಟ್‌ನಿಂದಾಗಿ ಅನೇಕ ಅಂಗಡಿಗಳು ಸುಟ್ಟುಹೋಗಿವೆ. ಈ ರೀತಿಯಾಗಿ ಬಳ್ಳಾರಿಯಲ್ಲಿ ಆಗಿರತಕ್ಕಂಥ ಡ್ಯಾಮೇಜ್ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದಿದ್ದೇನೆ. ಇದೇ ರೀತಿಯಲ್ಲಿ ಬೆಂಗಳೂರಿನಲ್ಲಿ ೨೬ನೇ ತಾರೀಖು ಬಿದ್ದ ಭಾರಿ ಮಳೆಯಿಂದಾಗಿ ಅನೇಕ ಕಡೆ ಇರತಕ್ಕಂಥ ಗುಡಿಸಲುಗಳು ಕುಸಿದಿರುತ್ತದೆ. ಒಂದು ಗುಡಿಸಲು ಗೋಡೆ ಕುಸಿದು ೭ ತಿಂಗಳ ಮಗುವು ಮೃತಪಟ್ಟಿರುತ್ತದೆ. ಅದರ ತಂದೆ ತಾಯಿಗಳಿಗೆ ಗಾಯಗಳಾಗಿರುತ್ತದೆ. ಯಶವಂತಪುರದಲ್ಲಿ ಹತ್ತಾರು ಗುಡಿಸಲು ನಾಶವಾಗಿದೆ. ಇದೇ ರೀತಿಯಲ್ಲಿ ಕಾಪ್ಪಾಕ್ಷಿಪಾಳ್ಯ, ದೀನಬಂದುನಗರ, ಮಂಜುನಾಥನಗರದಲ್ಲಿರುವ ಗುಡಿಸಲುಗಳು ಹಾಗೂ ಮನೆಗಳು ನೆಲಸಮವಾಗಿವೆ. ಮತ್ತೆ ಅಲ್‌ಬಹದ್ದೂರ್ ಶಾಸ್ತ್ರಿ ನಗರ ತಿಪ್ಪಸಂದ್ರ ಮತ್ತು ಎನ್.ಜಿ.ಎಫ್. ಪ್ರದೇಶಗಳಿಗೆ ಮಳೆಯ ನೀರು ನುಗ್ಗಿ ಅನೇಕ ಜನರ ಆಸ್ತಿಪಾಸ್ತಿಗಳಿಗೆ ನಷ್ಟ ಉಂಟಾಗಿರುತ್ತವೆ. ಕೋಲಾರ ಜಿಲ್ಲೆಯ ಬಾಗಪಲ್ಲಿ, ಬಂಗಾರುಪೇಟೆ, ಚಿಕ್ಕಬಳ್ಳಾಪುರ, ಗುಡಿಬಂಡೆ, ಕೋಲಾರ, ಮಾಲೂರು ಶಿಡ್ಲಘಟ್ಟ, ಶ್ರೀನಿವಾಸಪುರ ಈ ಎಲ್ಲ ಕಡೆಗಳಲ್ಲೂ ಬಾರಿ ಮಳೆ ಬಿದ್ದ ಕಾರಣದಿಂದಾಗಿ ಸುಮಾರು ೭೦ ಮನೆಗಳು ಜಕಮ್‌ಗೊಂಡಿವೆ. ಬೆಳಗಳಿಗೆ ಹಾನಿಯಾಗಿದೆ ಎಂದೂ ಗೊತ್ತಾಗಿದೆ. ಹಾಗೆಯೇ ಮಧುಗಿರಿ ತಾಲ್ಲೂಕಿನಲ್ಲಿ ಬಾರಿ ಮಳೆ ಬಿದ್ದು ಕೊರಗೇನಹಳ್ಳಿ ಚಿಕ್ಕಮಾಲೂರು, ದೊಡ್ಡಮಾಲೂರುನಲ್ಲಿ ಸುಮಾರು ೪೦೦ ಎಕರೆ ಜಮೀನಿಗೆ ನೀರು ನುಗ್ಗಿ ಅನಾಹುತವಾಗಿದೆ. ಕೊಡಗೇನಹಳ್ಳಿಯಲ್ಲಿ ಸುಮಾರು ೪೦೦ ಮನೆಗಳು ಕುಸಿದು ಬಿದ್ದುಹೋಗಿವೆ. ಹಾನಿಗೊಳಗಾದ ಜನರು ಶಾಲೆಗಳಲ್ಲಿ ಮತ್ತು ದೇವಸ್ಥಾನದಲ್ಲಿ ಆಶ್ರಯ ಪಡೆದಿರುವ ಬಗ್ಗೆ ಸರ್ಕಾರಕ್ಕೆ ಬರೆದಿದ್ದೇನೆ. ತಾವರೇಕೆರೆ ಇಲ್ಲಿ ಒಬ್ಬ ಹುಡುಗಿ ಸತ್ತಿದ್ದಾಳೆ. ಅನೇಕ ಮನೆಗಳು ಕುಸಿದು ಬಿದ್ದುಹೋಗಿವೆ.

ಇನ್ನು ಬೀದರ್‌ಗೆ ಹೋಗಿದ್ದೆ. ಬೀದರ್ ವಿಷಯ ಚರ್ಚೆಯಾದಾಗಲಂ ಸಹ ಕೆಲವು ವಿಚಾರಗಳನ್ನು ಹೇಳಿದ್ದೇನೆ. ಅಲ್ಲಿಯೂ ಜನರ ಜೀವನ ಅಸ್ತವ್ಯಸ್ತವಾಗಿರುತ್ತದೆ. ಬೆಳೆಯೆಲ್ಲ ನಾಶವಾಗಿದೆ. ದ್ವಿದಳ ಧಾನ್ಯಗಳು ಪೈರುಗಳೆಲ್ಲ ವಿಪರೀತವಾದ ಮಳೆಯಿಂದಾಗಿ ಎಲ್ಲಾ ಕೊಳೆತುಹೋಗಿವೆ. ಮಣ್ಣಿನ ಗೋಡೆಗಳಂ ಬಿದ್ದು ಮನೆಗಳಲ್ಲ ಹಾಳಾಗಿವೆ. ಹೇಗೆ ಜನರು ವಿವಿಧ ತೊಂದರೆಗಳಿಗೆ ಒಳಗಾಗಿದ್ದಾರೆ. ೨೪ ಮಂದಿ ಸತ್ತಿದ್ದಾರೆ. ಮತ್ತೆ ಮಂಜರಾ ನದಿ ಪ್ರವಾಹದಿಂದಾಗಿ ಬಂಪಳ್ಳಿ ಗ್ರಾಮಂ ಸಂಪೂರ್ಣವಾಗಿ ನೀರಿನಿಂದ ಮುಳುಗಿ, ನೀರು ಸುತ್ತುವರಿದು ಅದು ಒಂದು ದ್ವೀಪದಂತಾಗಿದೆ. ಇನ್ನು ಚಿತ್ರದುರ್ಗದಲ್ಲಿ ಮಳೆಬಂದುದರಿಂದ ಜನರಿಗೆ ಸಂತೋಷವಾಗಿದ್ದರೂ, ಅಲ್ಲಿ ಇರುವ ಕ್ಷಯರೋಗದ ಆಸ್ಪತ್ರೆ ವಿಶೇಷವಾದ ಮಳೆಯಿಂದಾಗಿ ಎಲ್ಲ ಕಡೆ ನೀರು ಸೋರುತ್ತಿದ್ದು ಆಸ್ಪತ್ರೆಯಲ್ಲಿರತಕ್ಕಂಥ ರೋಗಿಗಳು ಮಲಗುವುದಕ್ಕೂ ಸ್ಥಳವಾಕಾಶವಿಲ್ಲದೆ ತೊಂದರೆಪಟ್ಟಿರುತ್ತಾರೆ. ಮತ್ತೆ ಅಲ್ಲಿರತಕ್ಕಂಥ ಸ್ಮಾಲ್ ಅಂದರೆ ಇಂಚಲವಾಡಿ ಕಾಲೋನಿಯಲ್ಲಿ ಎಂಟು ಮಣ್ಣಿನ ಮನೆಗಳು ಬಿದ್ದುಹೋಗಿವೆ. ಜನತಾ ಮನೆಗಳು ಬಿದ್ದು ನಾಶವಾಗಿವೆ. ಇದೇ ರೀತಿಯಲ್ಲಿ ಬೆಂಗಳೂರು ಮತ್ತು ಮೈಸೂರಿನಲ್ಲೂ ಹೀಗೆ ನಾನಾ ಕಡೆ ಬೇಕಾದಷ್ಟು ಅನಾಹುತಗಳು ಆಗಿವೆ. ಇಷ್ಟೆಲ್ಲ ಮಳೆ ಬಂದು ಅನಾಹುತಗಳಾಗಿದ್ದರೂ ಮಾನ್ಯ ಮುಖ್ಯ ಮಂತ್ರಿಗಳು ನಡೆದಿರುವ ಅನಾಹುತಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮೆಮೊರಂಡಮ್ ಕಳುಹಿಸಬೇಕಾಗಿತ್ತು. ಇವರು ಈಗ ಹೊಸದಾಗಿ ಮುಖ್ಯ ಮಂತ್ರಿಗಳಾಗಿದ್ದಾರೆ ಭಿನ್ನಪತ್ರಗಳನ್ನು ಸ್ವೀಕಾರ ಮಾಡುತ್ತಿದ್ದ ವಿಚಾರ ಪೇಪರ್‌ನಲ್ಲೆಲ್ಲ ಬಂದಿರುತ್ತದೆ. ಇಂಥ ಸಮಯದಲ್ಲಿ ಹೀಗೆ ಹೊರಗಡೆ ಸುತ್ತಾಡುತ್ತಿರುವುದಂ ಸರಿಯಲ್ಲವೆಂದು ನಾವುಗಳು ಹೇಳಿದಮೇಲೆ ಅವರು ಬಂದು ನೋಡಿ, ಇದರ ಬಗ್ಗೆ ಸೆಂಟ್ರಲ್ ಗೌರ್ನಮೆಂಟ್‌ಗೆ ಮೆಮೊರಂಡಮ್ ಕೊಟ್ಟಿದ್ದಾರೆ. ಮೆಮೊರಂಡಮ್‌ನಲ್ಲಿ ಒಂದೊಂದು ಡಿಸ್ಟ್ರಿಕ್ಟ್‌ಗೆ ಒಂದೊದೂ ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಹೇಳಿದ್ದಾರೆ. ಹಾನಿಗೊಳಗಾಗಿರುವ ಪ್ರದೇಶಗಳಲ್ಲಿ ಒಟ್ಟಾರೆ ಎಲ್ಲಾ ಕೆಲಸಗಳನ್ನು ಅಂದರೆ ರಸ್ತೆಗಳ ದುರಸ್ತಿ ಕಾರ್ಯಕ್ರಮ ರಿಲೀಫ್ ಕಾರ್ಯಕ್ರಮಂಗಳ

ಸಲುವಾಗಿ ಗ್ರೇಷಿಯಸ್ ಕ್ಯಾಷ್ ರಿಲೀಫ್ ಎಲ್ಲ ಸೇರಿ ೨೯೧ ಲಕ್ಷ ರೂಪಾಯಿಂಗಳನ್ನು ಕೊಟ್ಟಿದ್ದಾರೆಂದು ಹೇಳುತ್ತಿದ್ದಾರೆ.

ಇನ್ನೂ ಇವರು ೭–೮ ಕೋಟಿ ರೂಪಾಯಿಗಳನ್ನು ಕೇಳುತ್ತಿದ್ದಾರೆ. ಇವರ ಮೆಮೋರ್ಯಾಂಡಂ ಅನ್ನು ನೋಡಿದರೆ ಯಾವುದೋ ಕಾಲದಲ್ಲಿ ಕಿಟ್ಟಿ ರಸ್ತೆಗಳು, ಟ್ಯಾಂಕುಗಳನ್ನೆಲ್ಲಾ ಸೇರಿಸಿ ೭–೮ ಕೋಟಿ ರೂಪಾಯಿಗಳನ್ನು ಕೇಳುತ್ತಿದ್ದಾರೆ. ತಾವು ಇರುವುದನ್ನು ಇದ್ದಂತೆ ಕೇಳಿದರೆ ಕೇಂದ್ರ ಸರ್ಕಾರದಿಂದ ಸಹಾಯ ಬರಬಹುದೇ ಹೊರತು, ಇದನ್ನು ದಪ್ಪ ಮಾಡಿ ಕೇಳಿದರೆ ನಿಜವಾಗಿ ಕೇಂದ್ರ ಸರ್ಕಾರದವರು ಹಣ ಕೊಡುವುದಿಲ್ಲ. ಕಾಂಗ್ರೆಸ್ ಪಕ್ಷದ ವತಿಯಿಂದ ೫೦೦ ಕ್ವಿಂಟಾಲ್ ಅಕ್ಕಿಯಂನ್ನು ಸಂತ್ರಸ್ತರಿಗೆ ಹಂಚಿದ್ದೇವೆ. ಸರ್ಕಾರದವರು ಬಿಲ್ಡಿಂಗ್ ಮೆಟೀರಿಯಲ್ಸ್ ಅನ್ನು ಕೊಟ್ಟಿದ್ದಾರೆ, ಹಣ ಹಂಚಿದ್ದಾರೆ. ಇದೆಲ್ಲಾ ಸಾಲದು. ರಾಜ್ಯ ಸರ್ಕಾರ ಕೊಟ್ಟಿರತಕ್ಕದ್ದು ಏನೇನು ಸಾಲದು. ಕೊಡಬೇಕಾದುದು, ಮಾಡಬೇಕಾದುದು ಬಹಳ ಇದೆ. ಇದನ್ನೂ ಇವರು ಬಹಳ ಲೈಟ್ ಆಗಿ ತೆಗೆದುಕೊಂಡಿರುವುದನ್ನು ನೋಡಿದರೆ ವ್ಯಸನವಾಗುತ್ತದೆ. ಯಾವ ಪ್ರಮಾಣದಲ್ಲಿ ಮಾಡಬೇಕಾಗಿತ್ತು, ಆ ಪ್ರಮಾಣದಲ್ಲಿ ಮಾಡದೆ ಕೇಂದ್ರದಿಂದ ಬರಲಿ, ಮಾಡುತ್ತೇವೆ ಮಾಡ್ಬುತ್ತೇವೆ, ರೀಲೀಫ್ ಕೊಡುತ್ತೇವೆಂಬ ಆಸೆ ಮೇಲೆ ಇದ್ದಾರೆ. ಅವರು ರಿಲೀಫ್ ಕೊಡುತ್ತಾರೆ. ಆದರೆ ಇವರು ಕೊಡತಕ್ಕ ರಿಲೀಫ್ ಅನ್ನು ಪೂರ್ತಿ ಕೊಡಬೇಕೆಂದು ಹೇಳಂವುದಕ್ಕೆ ಇಷ್ಟಪಡುತ್ತೇನೆ. ರಸ್ತೆಗಳ ದುರಸ್ತಿ ಕಾರ್ಯ ಬಹಳ ಬೇಗ ಆಗಬೇಕಾಗಿದೆ. ಇವರ ರಸ್ತೆಯಲ್ಲಿ ಹೋದರೆ ಚಿನ್ನಾಗಿದ್ದವರು ಹಾಸಿಗೆ ಹಿಡಿಯಬೇಕಾಗುತ್ತದೆ. ನಾನು ಸ್ವಲ್ಪ ದಿನಗಳ ಹಿಂದೆ ಕಾರಿನಲ್ಲಿ ಹೋಗಿ ಪಂಪೆಳೆ ಸ್ಲಿಪ್ ಆಗಿ ಆಸ್ಪತ್ರೆ ಸೇರಿದ್ದೆ. ನಿಜವಾಗಿ ಇವರಿಂದಲೇ ಡ್ಯಾಮೇಜನ್ನು ಕ್ಲೈಂ ಮಾಡಬೇಕು. ಈ ಸಾರಿ ಪ್ರವಾಸ ಹೋಗಿಬಂದ ಮೇಲೆ ಟೈರುಗಳು ಸವೆದು ಹೋಗಿವೆ, ಬೇರೆ ಟೈರುಗಳನ್ನು ಹಾಕಿಸಬೇಕೆಂದು ಡ್ರೈವರ್ ಹೇಳುತ್ತಿದ್ದಾರೆ. ಇವರು ರಸ್ತೆ ರಿಪೇರಿ ಮಾಡುವುದನ್ನು ನೋಡಬೇಕು, ಗಂಡಿ ಬಿದ್ದ ಟಾರ್ ರಸ್ತೆಗೆ ಬರೀ ಮಣ್ಣನ್ನು ತುಂಬುತ್ತಿದ್ದಾರೆ. ಈ ರೀತಿ ಮಾಡಿ ಏತಕ್ಕೆ ಹಣವನ್ನು ವೇಸ್ಟ್ ಮಾಡುತ್ತಿದ್ದಾರೋ ಗೊತ್ತಿಲ್ಲ. ಹಣ ಖರ್ಚು ಮಾಡಬೇಕೆಂದರೆ ಯಾರಿಗಾದರೂ ಎತ್ತಿ ಕೊಡಿ. ಸಂಮ್ಮನೆ ರಿಪೇರಿ ಮಾಡಿಸುತ್ತೇವೆಂದು ಹೇಳಿ ಈ ರೀತಿ ಮಾಡುವುದರಲ್ಲಿ ಅರ್ಥವಿಲ್ಲ. ನೀವು ಮಾಡಬೇಕಾದ ಕೆಲಸ ಬಹಳ ಇದೆ. ರಿಲೀಫ್ ಕೆಲಸವನ್ನು ಬೇಗ ಮಾಡಬೇಕು. ಎಲ್ಲಿಂದಲೋ ದುಡ್ಡು ಬರುತ್ತದೆ, ಖರ್ಚು ಮಾಡುತ್ತೇವೆ ಅದರಿಂದ ಸ್ವಲ್ಪ ಉಳಿಸಿಕೊಳ್ಳುತ್ತೇವೆಂಬ ಭಾವನೆಯನ್ನು ಬಿಟ್ಟು ನಿಮ್ಮಲ್ಲಿರುವ ದುಡ್ಡನ್ನು ಖರ್ಚು ಮಾಡಿ ಜನರಿಗೆ ರಿಲೀಫ್ ಕೊಟ್ಟು ನಂತರ ಕೇಂದ್ರ ಸರ್ಕಾರದಿಂದ ಕ್ಲೈಂ ಮಾಡಬೇಕೆಂದು ಆಗ್ರಹಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್ ಕೃಷ್ಣನ್(ರಾಜಾಜಿನಗರ).—ಮಾನ್ಯ ಅಧ್ಯಕ್ಷರೆ, ಈ ದಿನ ಮಳೆಯ ಪ್ರಮಾಣ ಭಾರೀ ಗಂಡಾಂತರ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಹಾಗೂ ಬೆಂಗಳೂರು ನಗರದಲ್ಲಿ ಉಂಟಾಗಿದೆ ಎಂಬುದು ಎಲ್ಲರಿಗೂ ತಿಳಿದಿರತಕ್ಕ ವಿಷಯ. ಇಂಥ ಮಳೆ ನನಗೆ ತಿಳಿದ ಮಟ್ಟಿಗೆ ಹಿಂದೆಂದೂ ಆಗಿರಲಿಲ್ಲ. ಸುಮಾರು ೯೮ ವರ್ಷಗಳ ಹಿಂದೆ ಈ ತರಹ ಮಳೆ ಬಂದಿತ್ತು ಎಂದು ತಿಳಿದುಬಂದಿದೆ. ಈ ದಿನ ಬೆಂಗಳೂರು ನಗರದಲ್ಲಿ ಮಾತ್ರವಲ್ಲ, ಬೇರೆ ಕಡೆಯೂ ಹಾನಿಯಾಗಿದೆ. ಮೆಮೋರ್ಯಾಂಡಂನಲ್ಲಿ ಹೇಳಿದ ಹಾಗೆ ಮಂತ್ರಿ ನಾನು ಕೂಡ ಗುಲ್ಬರ್ಗಾ, ರಾಯಚೂರು, ಬಳ್ಳಾರಿ, ತುಮಕೂರು ಜಿಲ್ಲೆಯಲ್ಲಿ ಸುತ್ತಾಡಿಕೊಂಡು ಬಂದು ನೋಡಿದ ಹಾಗೆ ದೊಡ್ಡ ಪ್ರಮಾಣದಲ್ಲೇ ಅನಾಹುತವಾಗಿದೆ. ಈ ಅಂಕಿಅಂಶಗಳ ವಿವರಗಳನ್ನು ನಾನು ಹೇಳಂವುದಕ್ಕೆ ಹೋಗುವುದಿಲ್ಲ. ಕೆಲವು ವಿಚಾರಗಳನ್ನು ಮಾತ್ರ ಹೇಳಲೇಬೇಕಾದೆ. ನಾನು ಮೆಮೋರ್ಯಾಂಡಮ್ ನೋಡಿದೆ. ಸರ್ಕಾರ ಕೊಟ್ಟಿರುವ ಮೆಮೋರ್ಯಾಂಡಮ್ ಇದು. ಇದಕ್ಕೂ ವಾಸ್ತವಾಂಶಕ್ಕೂ ಬಹಳ ವ್ಯತ್ಯಾಸ ಇದೆ ಎಂದು ಕಂಡು ಬರುತ್ತದೆ. ಉದಾಹರಣೆಗೆ ಹೇಳಂವುದಾದರೆ, ಬೆಂಗಳೂರಿನಲ್ಲಿ ಸತ್ತವರ ಸಂಖ್ಯೆ ೧೫ ಎಂದು ಕೊಟ್ಟಿದ್ದಾರೆ Breach of two tanks, damages to 4 tanks, damages to 1,179 houses involving a total loss of Rs. 53.94 lakhs ಎಂದು ಹೇಳಿದ್ದಾರೆ. ಆದರೆ ನವೆಂಗೆ ಗೊತ್ತಿರುವ ಪ್ರಕಾರ ೧೫ ಜನ ಅಲ್ಲ. ಇದಕ್ಕಿಂತ ಜಾಸ್ತಿ ಅಂದರೆ ೪೭ ಜನ ಸತ್ತಿದ್ದಾರೆಂದು ಪಶ್ಚಿಕೆಯಲ್ಲಿ ಬಂದಿದೆ ಬೆಂಗಳೂರು ಮೇಯರ್ ಅವರು ಒಂದು ಸಾರಿ ಸಭೆ ಕರೆದಿದ್ದರು. ಅದರಲ್ಲಿ ೧೯ ಜನ ಸತ್ತಿದ್ದಾರೆ ಎಂದು ಹೇಳಿದರು. ಆದಾದಮೇಲೆ ಮಾನ್ಯ ಮುಖ್ಯಮಂತ್ರಿಗಳು ಒಂದು ಸಭೆಗೆ ನನ್ನನ್ನು ಕರೆಸಿದ್ದರು. ನಗರದ ಎಲ್ಲ ಶಾಸಕರನ್ನೂ ಕರೆಸಿದ್ದರು. ಅಲ್ಲೂ ಕೂಡ

೨೫-೩೦ ಜನ ಸತ್ತಿರಬಹುದು ಎಂದು ಹೇಳಿದ್ದಾರೆ. ಬೆಂಗಳೂರು ನಗರದ್ದಲ್ಲದೆ ಬೇರೆ ಕಡೆಯ ಅಂಕಿ ಅಂಶಗಳನ್ನು ನೋಡಿದರೂ ಬಹಳ ವಿರೋಧಾಭಾಸ ಕಂಡು ಬರುತ್ತದೆ. ಉದಾಹರಣೆಗೆ ತುಮಕೂರು ಜಿಲ್ಲೆಯಲ್ಲಿ ಸುಮಾರು ಜನ ಸತ್ತಿದ್ದಾರೆ ಎಂದು ಪತ್ರಿಕೆಯಲ್ಲಿ ಬಂದಿದೆ. ಅದಲ್ಲದೆ ೨೭೫ ಮನೆ ನಾಶ ವಾಗಿದೆ ಎಂದು ಹೇಳಿದ್ದಾರೆ. ಆ ಅಂಕಿಅಂಶ ನೋಡಿದರೂ ಸರಿಯಾಗಿಲ್ಲ. ಆದ್ದರಿಂದ ನನಗನ್ನಿಸುವುದು ಈ ಅಂಕಿಅಂಶಗಳೆಲ್ಲಾ ಸರಿಯಾಗಿಲ್ಲ ಅಂತ. ನಾನು ಮೆಮೋರ್ಯಾಂಡಮ್ ಕೊಡುವಾಗ ಉತ್ಪ್ರೇಕ್ಷೆ ಮಾಡಿ ಹೇಳಬೇಕು ಎಂದು ಹೇಳುವುದಿಲ್ಲ. ಆದರೆ ಇರುವುದನ್ನು ಸರಿಯಾಗಿ ಹೇಳಿಲ್ಲ ಅನ್ನಿಸುತ್ತದೆ. ಬೆಂಗಳೂರು ನಗರದಲ್ಲಿ ಭಾರಿ ಮಳೆಯಾಗಿ ಬಹಳ ನಷ್ಟವಾಗಿದೆ. ಸೆಪ್ಟೆಂಬರ್ ೯ ರಿಂದ ೧೨ರವರೆಗೂ ಮಳೆ ಬಂತು. ೧೧ನೇ ತಾರೀಖಿಂತೂ ಸಿಕ್ಕಾಪಟ್ಟೆ ಮಳೆ ಬಂತು. ಯಾರೂ ಹೊರಗೆ ಹೋಗುವ ಹಾಗಿರಲಿಲ್ಲ ಅಂಥ ಮಳೆ ಬಂತು. ನನ್ನ ಅಭಿಪ್ರಾಯದಲ್ಲಿ ಸತ್ತವರ ಸಂಖ್ಯೆ ಇನ್ನೂ ಹೆಚ್ಚಾಗಿದೆ. ಬಿಬ್ಬಿ ೩೦ ಜನ ಎಂದು ಇಲ್ಲಿದೆ ಬೆಂಗಳೂರು ನಗರ ಒಂದರಲ್ಲೇ ೧೯ ಎಂದು ಮೇಯರ್ ಅವರು ಹೇಳಿದ್ದಾರೆ. ಬೆಂಗಳೂರು ಜಿಲ್ಲೆಯಲ್ಲಿ ೧೫+೫—೨೦ ಜನ ಎಂದು ಇಲ್ಲಿ ಹೇಳುತ್ತೀರಿ. ಇದರಲ್ಲಿ ಬೆಂಗಳೂರು ಗ್ರಾಮಾಂತರ ವಂತು ಬೆಂಗಳೂರು ನಗರ ಎರಡೂ ಸೇರಿದೆ ಎಂದು ಹೇಳುತ್ತೀರಿ. ಬೆಂಗಳೂರು ನಗರದಲ್ಲಿ ೧೯ ಜನ ಸತ್ತಿದ್ದಾರೆ ಎಂದು ಕಾರ್ಪೊರೇಷನ್ನಿನವರು ಹೇಳುತ್ತಾರೆ. ಹಿಂದೆ ಸಭೆ ನಡೆಸಿದಾಗ ೧೯ ಜನ ಸತ್ತಿರುವವರ ಬಗ್ಗೆ ಸಂತಾಪ ಸೂಚನೆ ಮಾಡುವುದಕ್ಕೆ ಕೂಡ ಹೋದರು. ನಾನು ಆಗ ೪೭ ಜನ ಸತ್ತಿದ್ದಾರಲ್ಲ ಎಂದು ಹೇಳಿದೆ. ಆಗ ಅವರು ಬೆಂಗಳೂರು ಕಾರ್ಪೊರೇಷನ್ ಲಿಮಿಟ್‌ನಲ್ಲಿ ಸತ್ತವರ ಸಂಖ್ಯೆ ಮಾತ್ರ ಇದು, ಬಿ.ಡಿ.ಎ. ಲಿಮಿಟ್‌ದಲ್ಲ ಎಂದು ಹೇಳಿದರು. ಮಳೆ ಯಿಂದ ೪೭ ಜನ ಸತ್ತಿದ್ದಾರೆ, ನೀವು ೧೯ ಜನಕ್ಕೆ ಸಂತಾಪ ಸೂಚನೆ ಮಾಡುವುದು ಸರಿಯೇ ಎಂದು ಕೇಳಿದಾಗ ಸಂಖ್ಯೆ ಬಿಟ್ಟುಬಿಡೋಣ, ಯಾರು ಯಾರು ಸತ್ತಿದಾ ರೋ ಎಲ್ಲರಿಗೂ ಸಂತಾಪ ಸೂಚಿಸೋಣ, ಎಂದು ತೀರ್ಮಾನ ಕೈಗೊಂಡರು. ಹೀಗಿರಬೇಕಾದರೆ ಈ ಅಂಕಿಅಂಶ ಹೇಗೆ ಸರಿ ಎಂದು ಕೇಳಬೇಕಾಗಿದೆ ? ಮನೆ ನಾಶವಾಗಿರುವ ಅಂಕಿಅಂಶವಾಗಲೀ ಸಾವಿಗೀಡಾಗಿರುವವರ ಅಂಕಿಅಂಶವಾಗಲೀ, ದನಕರುಗಳು ಸತ್ತಿರುವುದಾಗಲೀ ಸರಿಯಾದ ವಿವರಗಳನ್ನು ಕೊಟ್ಟಿಲ್ಲ. ಇರುವುದ ಕ್ಕಿಂತ ಕಡಿಮೆ ನಮೂದು ಮಾಡಿದ್ದೀರಿ. ಇದನ್ನು ಸರಿಯಾಗಿ ಕೊಡಬೇಕಾಗಿತ್ತು. ಇಲ್ಲದಿದ್ದರೆ ಪರಿಹಾರವನ್ನು ಸರಿಯಾಗಿ ಕೊಡುವುದಕ್ಕಾಗುವುದಿಲ್ಲ ಎಂದು ನನ್ನ ಸ್ಪಷ್ಟವಾದ ಅಭಿಪ್ರಾಯ, ಸಾವಿಗೀಡಾಗಿರುವವರು ಮತ್ತು ಮನೆ ಕಳೆದುಕೊಂಡಿರುವವರಂ ಯಾರು ಯಾರು ಎಂದರೆ ಎಲ್ಲಾ ನಿರ್ಗತಿಕರು, ಬಡವರು ಇವರಲ್ಲಿ ತಗ್ಗು ಪ್ರದೇಶದಲ್ಲಿ ಇರುವವರು ಜಾಸ್ತಿ ಇದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ.—ಬೆಂಗಳೂರು ಅರ್ಬನ್ ಡಿಸ್ಟ್ರಿಕ್ಟ್ ಮತ್ತು ಬೆಂಗಳೂರು ರೂರಲ್ ಡಿಸ್ಟ್ರಿಕ್ಟ್ ಎಂದು ಸಪರೇಟಾಗಿ ವಿವರಗಳನ್ನು ಕೊಟ್ಟಿದ್ದಾರೆ. In page 8, Chapter-4 the figures of rain damages in Bangalore city during September are given. I do concede that they should have included the Bangalore City Corporation here. You please go to Chapter-4, it is clarified there.

Sri M. S. Krishnan,—Don't take it personally. I am not criticising you. What I am saying is about our engineers. ಯಾವತ್ತೇ ಆದನ್ನು ಕಟ್ಟಿರಬಹುದು. ಕಳೆದ ೧೫-೨೦ ವರ್ಷಗಳ ಹಿಂದೆ ಕಟ್ಟಿರಬಹುದು. ಆದರೆ ಪ್ರಶ್ನೆ ಅದು ಅಲ್ಲ. ಪ್ರಾಸ್ಪೆಕ್ಟೀವ್ ಪ್ಲಾನ್ ಇಟ್ಟುಕೊಂಡು ೧೯೦೦ ರಲ್ಲಿ ಹೀಗೆ ಆಗಿದೆ, ಪ್ರತಿ ೧೦೦ ವರ್ಷಗಳಿ ಗೊಮ್ಮೆ ಹೀಗೆ ಮಳೆ ಬರುತ್ತದೆ ಎಂಬುದು ತಿಳಿದಿದ್ದರೂ ಕೂಡ ಏಕೆ ಈ ಬಗ್ಗೆ ಗಮನಹರಿಸಿಲ್ಲ. ಇದ ನ್ನೆಲ್ಲಾ ತಿಳಿದಿರುವ ಎಂಜಿನಿಯರ್ಸ್ ಏಕೆ ಸುಮ್ಮನೆ ಇದ್ದರು, ಮತ್ತೆ ಈ ರೀತಿ ಮಳೆ ಬರಬಹುದೆಂದು ಕೊಂಡು ಎಂಜಿನಿಯರ್ಸ್ ಬ್ರಿಡ್ಜ್‌ಗಳನ್ನು ಸರಿ ಮಾಡಬೇಕಾಗಿತ್ತು. ಮತ್ತೆ ಬೆಂಗಳೂರು ನಗರದಲ್ಲಿ ಮಿಲ್ಲರ್ ಟ್ಯಾಂಕ್ ಇದೆ. ನಮ್ಮ ಅದೃಷ್ಟ, ಅಲ್ಲಿದ್ದ ಸ್ಲಮ್ ತೆಗೆದು ದೂರದಲ್ಲಿ ಹಾಕಿದ್ದಾರೆ ಇದ ರಿಂದಾಗಿ ಸಾವಿರಾರು ಜನರು ಬದುಕಿದಂತಾಯಿತು. ಸ್ಲಮ್ ಅಲ್ಲೇ ಇದ್ದು ಮಳೆ ಬಂದಿದ್ದರೆ ಅಲ್ಲಿ ಸಾವಿರಾರು ಹೆಣಗಳು ತೇಲುತ್ತಿದ್ದವು. ನೂರಾರು ಸ್ಲಮ್‌ಗಳನ್ನು ತೆಗೆದಿದ್ದೀರಿ. ಮತ್ತೆ ಆ ಜಾಗದಲ್ಲಿ ದೊಡ್ಡ ದೊಡ್ಡ ಮನೆಗಳನ್ನು ಕಟ್ಟುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಅಲ್ಲಿ ವಾಹಿಳೆಯರ ಹಾಸ್ಟೆಲ್ ಬೇರೆ ಇದೆ. ಈ ಹಾಸ್ಟೆಲ್ ನೀರಿನಲ್ಲಿ ಮುಳುಗಿದಾಗ ೧೫೦ ಹೆಣ್ಣುಮಕ್ಕಳು ಅಲ್ಲಿ ಇದ್ದರು.

ಅವರನ್ನು ಅಲ್ಲಿಂದ ಖಾಲಿ ಮಾಡಿಸಿ ಸ್ವೀಡಿಯಂನಲ್ಲಿರಲು ಅವಕಾಶ ಕೊಟ್ಟರೂ ಕೂಡಾ ಅವರಿಗೆ ನೀರು ಕೊಡಲಿಲ್ಲ. ಮಂತ್ರಿ ಹಾಸ್ಟೆಲ್ ಬಿಡಬೇಕೆಂದು ಬೆದರಿಕೆ ಬೇರೆ. ಮತ್ತೆ ರಾಜಕಂಮಾರಿ ಅಂತಾ ಏನೋ ಒಬ್ಬ ಲೇಡಿ ಆ ಹೆಣ್ಣುಮಕ್ಕಳ ಮೇಲೆ ಬೆದರಿಕೆ ಹಾಕಿದ್ದು ಆ ಹೆಣ್ಣುಮಕ್ಕಳು ಆಕೆ ಮೇಲೆ ಪ್ರೊಟೆಸ್ಟ್ ಮಾಡಿದ್ದಾರೆ.

ಅಧ್ಯಕ್ಷರು.—ನಿಮಗೆ ೨೦ ನಿಮಿಷ ಅವಕಾಶ ಕೊಡುತ್ತೇನೆ. ಆಪ್ಪರಲ್ಲಿ ತಾವು ತಮ್ಮ ಭಾಷಣವನ್ನು ಮುಕ್ತಾಯ ಮಾಡಿ.

ಶ್ರೀ ಎಂ. ವೈ. ಕೃಷ್ಣನ್.—ಒಂದು ಮಾತನ್ನು ಹೇಳುತ್ತೇನೆ, ಬೆಂಗಳೂರಿನ ವಿಲ್ಸನ್ ಟ್ಯಾಂಕ್‌ನ ಹತ್ತಿರ ದೊಡ್ಡ ದೊಡ್ಡವರಿಗೆ ಸೈಟುಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆಂದು ಕೇಳಿದ್ದೇನೆ. ಆ ಹಳ್ಳದಲ್ಲಿ ಪಿತಕ್ಕೆ ಸೈಟುಗಳನ್ನು ಮಾಡುತ್ತೀರಿ ? ಅವರಿಗೆ ಬೇರೆ ಕಡೆ ಕೊಡಿ. ಅಲ್ಲಿ ಹಿಂದಿನಿಂದ ಉದ್ಯಾನವನ ಮಾಡಬೇಕೆಂದು ಮಂತ್ರಿ ಆಟದ ಮೈದಾನ ಮಾಡಬೇಕೆಂದು ಹೇಳುತ್ತಿದ್ದರು. ಅಲ್ಲಿಯ ಸಾರ್ವಜನಿಕರು ಕೂಡ ಆ ಜಾಗವನ್ನು ಆಟದ ಮೈದಾನ ಹಾಗೂ ಉದ್ಯಾನವನಕ್ಕೆ ವಿನಿಯೋಗಿಸಬೇಕೆಂದು ಕೇಳುತ್ತಿದ್ದರು. ಈಗ ಅದೆಲ್ಲಾ ಹೋಗಿ, ಅಲ್ಲಿ ಜಾಗ ಕೂಡ ಸ್ವಲ್ಪ ಉಳಿದಿದೆ. ಅಲ್ಲಿ ಸೈಟುಗಳನ್ನು ಮಾಡಲಿಕ್ಕೆ ಕಾರ್ಪೊರೇಷನ್‌ನವರು ಪರ್ಮಿಟ್ ಮಾಡಬಾರದಂ. ಅದರ ಬಗ್ಗೆ ಎನ್‌ಕ್ವಾಯರಿ ಮಾಡಬೇಕಂ. ಈಗಲಾದರೂ ಅದರ ಕಡೆಗೆ ಗಮನ ಹರಿಸಿ, ಅಲ್ಲಿ ಯಾವ ಆಧಾರದ ಮೇಲೆ ಸೈಟುಗಳನ್ನು ಮಾಡುತ್ತಾರೆ ? ಒಳಗಿಂದೊಳಗೆ ಏನಾದರೂ ನಡೆದಿದೆಯೇ ಎಂಬುದನ್ನು ನೋಡಬೇಕಂ. ಸಾಹುಕಾರರು ಹಣಕೊಟ್ಟು ಇಂತಹ ಕೆಲಸ ಮಾಡಿಸುತ್ತಿರಬೇಕು. ಈ ಬಗ್ಗೆ ಸಾರ್ವಜನಿಕರಲ್ಲಿ ಆ ಒಂದು ಅಭಿಪ್ರಾಯ ಬಂದಿದೆ. ಇದರ ಬಗ್ಗೆ ಪತ್ರಿಕೆಗಳಲ್ಲಿಯೂ ಸಹ ವರದಿ ಬಂದಿದೆ. ಈಗಲಾದರೂ ಆ ಬಗ್ಗೆ ಎನ್‌ಕ್ವಾಯರಿ ಮಾಡಬೇಕು. ಮುಂದೆ ಬಂದಾಗ ನಮ್ಮ ಅಧಿಕಾರಿಗಳು ಯಾವರೀತಿ ಕೆಲಸ ಮಾಡಿದರು ಎಂಬುದರ ಬಗ್ಗೆ ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ, ನಮ್ಮ ಕಾರ್ಪೊರೇಷನ್ ಅಧಿಕಾರಿಗಳ ಪಾತ್ರ, ಕರ್ನಾಟಕ ವಾಟರ್‌ಸಪ್ಲೈ ಬೋರ್ಡ್‌ನ ಅಧಿಕಾರಿಗಳ ಪಾತ್ರ, ಪೋಲೀಸ್ ಅಧಿಕಾರಿಗಳ ಪಾತ್ರ ಹಾಗೂ ಅವರುಗಳ ಕರ್ತವ್ಯದ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಬೇಕಾಗಿದೆ. ಕಾರ್ಪೊರೇಷನ್ ಅಧಿಕಾರಿಗಳು ಬಹಳ ಮೆಚ್ಚುಗೆಯ ಕೆಲಸವನ್ನು ಮಾಡಿದ್ದಾರೆ. ಅವರು ರಾತ್ರಿ ಹಗಲು ಕೆಲಸ ಮಾಡಿದ್ದಾರೆ. ಅದರ ಬಗ್ಗೆ ನಾನು ಪುನಃ ಹೇಳಬೇಕಾಗಿಲ್ಲ. ಬೆಂಗಳೂರು ನಗರ ಪಾಲಿಕೆಯ ಮೇಯರ್ ಲಾರೆನ್ಸ್ ಫರ್ನಾಂಡಿಸ್‌ರವರು ಕೂಡ ಒಳ್ಳೆಯ ಕೆಲಸ ಮಾಡಿದ್ದಾರೆ. ಅವರ ಬಗ್ಗೆ ಸಹ ಮೆಚ್ಚುಗೆಯನ್ನು ವ್ಯಕ್ತಪಡಿಸಬೇಕಾಗಿದೆ. ನಮ್ಮ ಮೇಯರ್‌ರವರು ಸಹ ರಾತ್ರಿ, ಬೆಳಿಗ್ಗೆ ನಮ್ಮ ಜೊತೆಯಲ್ಲಿಯೇ ಸುತ್ತಾಡಿ, ಕಾಲು ಆಗಿದ್ದಿದ್ದರೂ ಅವರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅವರು ಬಹಳ ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಆದೇರೀತಿ ಕಾರ್ಪೊರೇಟರ್ ಆದ ಸೋಮಂ ಎಂಬುವರು ಬೆಳಿಗ್ಗೆ, ರಾತ್ರಿ ಕೆಲಸ ಮಾಡಿದರು ಅವರುಗಳಿಗೆಲ್ಲ ನಾನು ವಂದನೆಗಳನ್ನು ಸಲ್ಲಿಸುತ್ತೇನೆ. ಆದೇರೀತಿ ಪೋಲೀಸ್ ಅಧಿಕಾರಿಯಾದ ಕೌರಿ ಎಂಬುವರು ಒಳ್ಳೆಯ ಕೆಲಸ ಮಾಡಿದ್ದಾರೆ ಮಾನ್ಯ ಮಂಖ್ಯಿ ಮಂತ್ರಿಗಳು ಹಾಗೂ ಮುಂತ್ರಿಗಳಾದ ದೇಶಪಾಂಡೆಯವರು ಸಹ ರಾಳಜಿ ವಹಿಸಿ ಕೆಲಸ ಮಾಡಿದ್ದಾರೆ. ನನಗೆ ಬಹಳ ಸಂತೋಷ. ಆದರೆ ಒಂದು ಪ್ರಶ್ನೆ ಏನೆಂದರೆ, ಆ ಸಂದರ್ಭದಲ್ಲಿ ಮಾನ್ಯ ಮಂಖ್ಯಿ ಮಂತ್ರಿಗಳು ಹೊಳೆತ್ತುವ ಕೆಲಸವನ್ನು ಯುದ್ಧೋಪಾದಿಯಲ್ಲಿ ಮಾಡುತ್ತೇವೆಂದು ಹೇಳಿದರು ಆದೇ ರೀತಿ ಮೇಯರ್‌ರವರು ಸಹ ಹೇಳಿದರು, ಮಾನ್ಯ ಮಂತ್ರಿಗಳು ಸಹ ಹೇಳಿದರು. ಆದರೆ ಈಗ ಏನಾಗಿದೆ ಅಂದರೆ ಮಳೆ ನಿಂತಮೇಲೆ ಆ ಕೆಲಸ ನಿಂತುಹೋಗಿದೆ. ಎರಡು ದಿವಸ ಆ ಕಾಲ ಹೂಳನ್ನು ಎತ್ತಿ ಮೇಲಕ್ಕೆ ಹಾಕಿದರು. ನಮ್ಮ ವಿರಿಯಾದ ಬಗ್ಗೆಯೂ ಸಹ ಹೇಳುತ್ತಿದ್ದೇನೆ. ನಗರದ ಎಲ್ಲಾ ಕಡೆ ಸುತ್ತಾಡಲಿಕ್ಕೆ ನನಗೆ ಆಗಲಿಲ್ಲ, ಏಕೆಂದರೆ ಅಧಿವೇಶನ ನಡೆಯುತ್ತಿರುವಾಗ ಎಲ್ಲಾ ಕಡೆ ಹೋಗಲಿಕ್ಕೆ ಆಗಲಿಲ್ಲ. ಮೋರಿಗೆ ಕಟ್ಟಡ ಕಟ್ಟುತಕ್ಕ ಕೆಲಸವನ್ನೂ ಸಹ ಮಾಡುತ್ತಿಲ್ಲ. ಮಾಗಡಿ ರಸ್ತೆಯ ಬ್ರಿಡ್ಜನ್ನು ಒಡೆದು ಹಾಕಿದರು ಆ ಬ್ರಿಡ್ಜನ್ನು ಕಟ್ಟಲಿಕ್ಕೆ ಹಣವನ್ನು ಒದಗಿಸಲಿಲ್ಲ. ಅದರ ಬಗ್ಗೆ ನನಗೆ ಈಗ ಆನುಮಾನ ಬರುತ್ತಾ ಇದೆ, ಇವರು ಕೇಂದ್ರಸರ್ಕಾರಕ್ಕೆ ಸಲ್ಲಿಸಿರತಕ್ಕ ಮನವಿಯಲ್ಲಿ ಎಲ್ಲೂ ಆ ಬಾಬಿಗಾಗಿ ಹಣವನ್ನು ಕೇಳಿರುವುದು ಕಂಡುಬರುತ್ತಿಲ್ಲ. ರಿಟೈನಿಂಗ್ ವಾಲ್ ಕೆಲಸ ಎಲ್ಲೂ ಆಗುತ್ತಿಲ್ಲ. ನಾನು ಈ ಮನವಿಯಲ್ಲಿ ಎಲ್ಲಾ ಪುಟಗಳನ್ನು ತಿರುವಿಹಾಕಿದೆ, ಎಲ್ಲೂ ಕಾಣಿಸಲಿಲ್ಲ, ನಾನು ದಪ್ಪ ಕನ್ನಡಕ ಹಾಕಿಕೊಂಡು ನೋಡಿದೆ. ಅದು ಎಲ್ಲೂ ಕಾಣಲಿಲ್ಲ, ಬ್ರಿಡ್ಜ್ ಬಗ್ಗೆ ಹಣವನ್ನು ಒದಗಿಸಿರುವುದು ಕಾಣಲೇ ಇಲ್ಲ. ಅದು ನನ್ನ ಕಣ್ಣಿಗೆ ಬೀಳದಿದ್ದರೆ ಮಾನ್ಯಮಂತ್ರಿ

ಗಳು ಅದು ಎಲ್ಲಿದೆ ಎಂದು ಹೇಳಬೇಕು. ನಾನು ಭೂತಕನ್ನಡಿ ಹಾಕಿಕೊಂಡು ನೋಡಿದ್ದೇನೆ, ಆದರೂ ಕಾಣಲಿಲ್ಲ. ಅದನ್ನು ಸೇರಿಸದಿದ್ದರೆ ತಪ್ಪಾಗುತ್ತದೆ.

SRI R. V. DESHPANDE.—On page No. 14 we have shown the assistance required for Bangalore City Corporation. The assistance sought is Rs. 41.65 crores. In that Magadi Road is also included.

SRI M. S. KRISHNAN.—Under water supply distribution system you have mentioned about reconstruction of bridge across the pipeline road and supports to the 24'' dia-CI main from Mount Joy Reservoir to K. M. Hally reservoir at old Guddadahally village. I don't think it comes.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ದೇಶಪಾಂಡೆಯವರು ಬೆಂಗಳೂರು ಅರ್ಬನ್ ಡಿಸ್ಟ್ರಿಕ್ಟ್ ಎಂದರೆ ಸಿಟಿ ಕೂಡ ಸೇರುತ್ತದೆಂದು ಹೇಳುತ್ತಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ.—I do concede. ಬೆಂಗಳೂರು ಡಿಸ್ಟ್ರಿಕ್ಟ್ ಪ್ರತ್ಯೇಕವಾಗಿ ಬರಬೇಕಾಗಿತ್ತು.

ಶ್ರೀ ಎಂ.ಎಸ್. ಕೃಷ್ಣನ್.—ತಾವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ತಪ್ಪಾದುದನ್ನು ಸರಿಯಾಗಿ ವಿವರಿಸಿ ಹೇಳಿದ್ದಕ್ಕೆ ಸಂತೋಷ. ಒಟ್ಟು ೪೯ ಜನರು ಸತ್ತಿದ್ದಾರೆ. ಆದರೆ ಇವರ ಪ್ರಕಾರ ಬೆಂಗಳೂರು ಕಾರ್ಪೊರೇಷನ್ ಏರಿಯಾದಲ್ಲಿ ೩೪ ಜನ ಸತ್ತಿದ್ದಾರೆಂದು ಹೇಳಿದ್ದಾರೆ. ಆದರೆ ೫೩ ಜನ ಸತ್ತಿದ್ದಾರೆ. ಬೆಂಗಳೂರು ರೂರಲ್, ಅರ್ಬನ್, ಕಾರ್ಪೊರೇಷನ್ ಲಿಮಿಟ್ ಅಂತ ತೆಗೆದುಕೊಂಡರೂ ಇವರು ಕೊಟ್ಟಿರತಕ್ಕದ್ದು ಬಹಳ ಕಡಿಮೆ.

SRI R.V. DESHAPONDE.—In page 8, it is mentioned :

> ''In fact, 34 persons died in Bangalore city and in its environs and of them 19 deaths occurred within the city and in corporation limits. It may be mentioned here that even on 5th July, 1988 the city had experienced very heavy rainfall this year resulting in 8 deaths of human beings and 17 livestock.

Between 9th and 12th September, 34 deaths and on 5th July, 8 deaths. In the last para it is separately given.

SRI M.S. KRISHNAN.—Anyway I would humbly request him to check it up again. ಎಲ್ಲವನ್ನೂ ಮಿಕ್ಸಪ್ ಮಾಡಿಕೊನೆಗೆ ನೊಂದವರಿಗೆ ಪರಿಹಾರ ಬರದೇ ಇರುವಂತೆ ಮಾಡಬೇಡಿ.

ಇನ್ನು ಎರಡನೆಯದಾಗಿ, ಬಹಳಷ್ಟು ಜನರು ಸಾವಿಗೀಡಾಗಿದ್ದಾರೆ. ಹೆಚ್ಚಿನ ರೀತಿಯಲ್ಲಿ ಹಾನಿಗೊಳಗಾಗಿರುವವರೆಂದರೆ ಏನೂ ಇಲ್ಲದ ನಿರ್ಗತಿಕರು. ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ, ನನ್ನ ಕ್ಷೇತ್ರದಲ್ಲಿ ಕೃಷ್ಣಾನಗರ ಸ್ಲಂ, ವಿಜಯನಗರ ಸ್ಲಂ, ಚಾಮುಂಡಿ ಸ್ಲಂ ಎಂದು ಕೆಲವು ಸ್ಲಂಗಳಿವೆ. ಅದೇರೀತಿ ಮಾನ್ಯ ರೋಷನ್ ಬೇಗ್‌ರವರ ಕ್ಷೇತ್ರದಲ್ಲಿ ಮಿಲ್ಲರ್ ಟ್ಯಾಂಕ್‌ನಲ್ಲಿ ಕೂಡ ಸ್ಲಂಗಳಿವೆ. ನಾನೂ ಮತ್ತು ನನ್ನ ಕೆಲವು ಸ್ನೇಹಿತರು ಈ ಸ್ಲಂಗಳಿಗೆ ಹೋಗಿ ನೋಡಿಕೊಂಡು ಬಂದಿದ್ದೇವೆ, ಅಲ್ಲೆಲ್ಲಾ ಬಹಳ ಗುಡಿಸಲುಗಳು ಕೊಚ್ಚಿ ಹೋಗಿವೆ, ಅನೇಕರು ಸತ್ತಿದ್ದಾರೆ. ಸತ್ತವರಲ್ಲಿ ಸಣ್ಣ ಮಕ್ಕಳೂ ಕೂಡ ಸೇರಿವೆ. ಪಾದರಾಯನಪುರದಲ್ಲಿ ೨ ಮಕ್ಕಳು ಕೊಚ್ಚಿ ಹೋಗಿವೆ. ಇದಕ್ಕೆ ಕಾರಣ ಡ್ರೈನೇಜ್ ಸಿಸ್ಟಂ ಸರಿಯಿಲ್ಲದಿರುವುದು. ಅಹ್ಮದ್ ಎಂಬ ಒಬ್ಬ ಮಂಸ್ಲಿಂ ವಂತ್ತು ಆತನ ೩ ಮಕ್ಕಳು ಅಂದರೆ ಒಟ್ಟು ೪ ಜನರೂ ಸತ್ತಿದ್ದಾರೆ, ಏಕೆಂದರೆ ಆ ಜಾಗದಲ್ಲಿ ನೀರು ಬಹಳ ಎತ್ತರದವರೆಗೂ ಬಂದಂ ಅವರು ಹೊರಗೆ ಬರುವುದಕ್ಕೆ ಸಾಧ್ಯವಿಲ್ಲದೆ ಸತ್ತುಹೋದರು, ಅವರು ಬೀಡಿ ಕಾರ್ಮಿಕರು. ಹೀಗೆ

ಅನೇಕ ಕಡೆಗಳಲ್ಲಿ ಸ್ಲಂನಲ್ಲಿದ್ದವರು ಸತ್ತುಹೋಗಿದ್ದಾರೆ, ಬೆಂಗಳೂರು ನಗರದ ಸ್ಲಂನಲ್ಲಿದ್ದ ನಿರ್ಗತಿಕರು ಸತ್ತುಹೋಗಿದ್ದಾರೆ, ಅವರ ಆಸ್ತಿಪಾಸ್ತಿಗಳೂ ಕೂಡ ಕೊಚ್ಚಿಹೋಗಿವೆ. ಮನೆಗಳು ಬಿದ್ದು ಹೋಗಿವೆ ಲೋ ಲೈಯಿಂಗ್ ಏರಿಯಾದಲ್ಲಿದ್ದವರು ಒಹಳ ಜನರು ಈರೀತಿಯ ತೊಂದರೆಗೊಳಗಾಗಿದ್ದಾರೆ. ಹಿಂದೆ ಯಾವಾಗಲಾದರೂ ಈ ರೀತಿ ಆಗಿದ್ದರೆ ಅದು ಇಷ್ಟೊಂದು ದೊಡ್ಡಪ್ರಮಾಣದಲ್ಲಿ ಆಗಿರಲಿಲ್ಲ. ಆದರೆ ಇದು ಏತಕ್ಕೆ ಹೀಗಾಯಿತು. ಇದರಲ್ಲಿ ಯಾರದ್ದು ಹೊಣೆಗಾರಿಕೆ ಇದೆ. ನಿಮ್ಮ ಅಧಿಕಾರಿಗಳನ್ನು ಕೇಳಿದರೆ, ಮಳೆ ಜಾಸ್ತಿ ಬಂದು ಹೀಗಾಗಿದೆ, ಮಳೆ ಬಂದಿದ್ದಕ್ಕೆ ನಾವು ಕಾರಣರಲ್ಲ. ಇದಕ್ಕೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಒಂದುರೀತಿಯ ವಿವರಣೆಯನ್ನು ಕೊಟ್ಟರು ಮಳೆ ಜೋರಾಗಿ ಬಂದಿರತಕ್ಕದ್ದು ನಿಜ. ಆದರೆ ಬೆಂಗಳೂರಿನಂಥ ಈ ರಾಜಧಾನಿಯಲ್ಲಿ ಆಗಿರುವುದಕ್ಕೆ ಕಾರಣ ಏನು ? ನನಗೆ ತಿಳಿದಮಟ್ಟಿಗೆ ಇಲ್ಲಿನ ಚರಂಡಿ ವ್ಯವಸ್ಥೆ ಸರಿಯಾಗಿಲ್ಲ. ಸುಮಾರು ೩೦-೪೦ ವರ್ಷಗಳ ಹಿಂದೆ ಇದ್ದಂಥ ರೀತಿಯಲ್ಲೇ ಈ ಚರಂಡಿಗಳಿವೆ. ಶಿವಾಜಿ ವ್ಯಾಲಿ ಎಂದೂ ದೊಡ್ಡ ಮೋರಿ ಇದೆ. ಅದು ಸ್ಯಾಂಕಿ ಟ್ಯಾಂಕ್‌ನಿಂದ ಮೈಸೂರು ರೋಡ್‌ನವರೆಗೂ ಹೋಗುತ್ತದೆ. ಇದೂ ಸ್ಯಾರಂ ವಾಟರ್ ಡ್ರೈನ್. ಜೋರಾಗಿ ಮಳೆ ಬಿದ್ದರೆ ಆ ನೀರೂ ಹೋಗುವುದಕ್ಕಾಗಿ ಮಾಡಿರತಕ್ಕದ್ದು. ಆದರೆ ಆ ಮೋರಿಯಲ್ಲಿ ಸಿಲ್ಟ್ ತುಂಬಿಕೊಂಡಿರುವುದರಿಂದ ಹೆಚ್ಚು ನೀರು ಹೋಗುವುದಕ್ಕಾಗುವುದಿಲ್ಲ. ಅಂದಮೇಲೆ ಆ ನೀರೆಲ್ಲಾ ಚರಂಡಿಯಿಂದ ಹೊರಗೆ ಹರಿಯುತ್ತದೆ. ಇದನ್ನು ಸಂಬಂಧಪಟ್ಟವರೂ ಆಗಿಂದಾಗ್ಗೆ ಸಿಲ್ಟ್ ತೆಗೆಸಿ ಕ್ಲೀನ್ ಮಾಡಿಸಬೇಕು. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ಈಗ ಟೌನ್ ಪ್ಲಾನಿಂಗ್ ಅಥಾರಿಟಿ ಇದೆ, ಕಾರ್ಪೊರೇಷನ್ ಇಂಜಿನಿಯರ್ಸ್ ಇದ್ದಾರೆ, ಇವರಿಬ್ಬರೂ ಸೇರಿ ಇದರ ಬಗ್ಗೆ ಯೋಜನೆ ಮಾಡಬೇಕು. ನಾವು ಆ ಪ್ರದೇಶವನ್ನೆಲ್ಲಾ ನೋಡಿಕೊಂಡು ಬಂದಿದ್ದೇವೆ. ನನ್ನ ಜೊತೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಬಂದಿದ್ದರು, ಮಾನ್ಯ ದೇಶಪಾಂಡೆಯವರೂ ಕೂಡ ಬಂದಿದ್ದರು. ಅವರಿಗೆ ನಾನು ಅಭಿನಂದಿಸುತ್ತೇನೆ.

ಏಕೆ ಹೀಗೆ ಆಗಿದೆ ? ಈಗ ಶಾರ್ ಟ್ರೀಟ್‌ಮೆಂಟ್ ರೀತಿಯಲ್ಲಿ ಎಲ್ಲರೂ ಎಚ್ಚೆತ್ತುಕೊಳ್ಳುತ್ತಿದ್ದಾರೆ. ಮೊದಲೇ ಸರಿ ಮಾಡಿದ್ದರೆ ಈ ಪರಿಸ್ಥಿತಿ ಬರುತ್ತಾ ಇರಲಿಲ್ಲ. ಇವತ್ತು ಡ್ರಯನೇಜ್‌ಗಳಲ್ಲಿ ಸಿಲ್ಟ್ ಎಂದರೆ ಮಣ್ಣು ಮರಳು ತುಂಬಿದೆ, ಈ ಹೂಳನ್ನು ಕಳೆದ ೧೫-೨೦ ವರ್ಷಗಳಿಂದ ತೆಗೆದಿಲ್ಲ. ಇದರಿಂದ ನೀರೆಲ್ಲಾ ಮನೆಯೊಳಗೆ ಹೋಗಿದೆ. ಇದೂ ಒಂದು ಮುಖ್ಯ ಕಾರಣ ಇದಂಲ್ಲಿ ಸರ್ಕಾರದ ವೈಫಲ್ಯತೆ, ಕಾರ್ಪೊರೇಷನ್‌ನವರ ವೈಫಲ್ಯತೆ, ಇಂಜಿನಿಯರ್‌ಗಳ ವೈಫಲ್ಯತೆ ಎದ್ದು ಕಾಣುತ್ತದೆ. ಪ್ರಾಸ್‌ಪೆಕ್ಟೀವ್ ಪ್ಲಾನಿಂಗ್ ಇಲ್ಲದೇ ಇರುವುದರಿಂದ ಬಡಪರಿಗೆ ತೊಂದರೆ ಬಂದಿದೆ ಎಂದು ಹೇಳುತ್ತೇನೆ ಇನ್ನು ಡ್ರಯನೇಜ್ ಪಕ್ಕದಲ್ಲಿ, ಮೋರಿ ಪಕ್ಕದಲ್ಲಿ ಅಡ್ಡಗೋಡೆ ಇನ್ನೂ ಕಟ್ಟಿಲ್ಲ. ಅನೇಕ ಕಡೆ ಇಂತಹ ಅಡ್ಡಗೋಡೆ ಕಟ್ಟಿಲ್ಲ ಅಂಡಾಳಮ್ಮ ಬಡಾವಣೆಯಲ್ಲಿ ಒಂದು ಹಳ್ಳ ಇದೆ. ಅಲ್ಲಿ ಪಕ್ಕದಲ್ಲಿ ಕಟ್ಟಿಡ ಕಟ್ಟಿಲು ಅನೇಕ ವರ್ಷಗಳಿಂದ ಕೇಳುತ್ತಿದ್ದೇನೆ. ಮಾಡುತ್ತೇವೆ ಎಂದು ಹೇಳಿ ಸ್ವಲ್ಪ ಸ್ವಲ್ಪ ಕೆಲಸ ಮಾಡುತ್ತಿದ್ದಾರೆ. ನಾಯಿಗೆ ರೊಟ್ಟಿ ಹಾಕಂವ ರೀತಿಯಲ್ಲಿ ಕೆಲಸಕಾರ್ಯಗಳು ಆಗುತ್ತಿವೆ. ಇಷ್ಟು ಭಾರಿ ಮಳೆ ಬಂದಿರುವುದರಿಂದ ಈ ರೀತಿ ಆಗಿದೆ ಎಂದು ಕೈ ಕಟ್ಟಿ ಕೂತರೆ ಯಾವ ಕೆಲಸವೂ ಆಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಜೊತೆಯಲ್ಲಿ ರಸ್ತೆಗಳ ಮೇಲೆ ಹಳೇ ಕಾಲದ ಬ್ರಿಡ್ಜ್‌ಗಳನ್ನು ಕಟ್ಟಿದ್ದಾರೆ. ನಾನೂ ಕೂಡಾ ಎಂಜಿನಿಯರಿಂಗ್ ಓದಿದ್ದೇನೆ. ಆದರೆ ಕೆಲಸ ಮಾಡಿಲ್ಲ. ಇವತ್ತು ನೀರು ಹೋಗುವುದಕ್ಕೆ ಆರ್ಚ್ ರೀತಿಯಲ್ಲಿ ಬ್ರಿಡ್ಜ್ ಕಟ್ಟಿದ್ದು ಒಟ್ಟಿಗೆ ಬಂದ ನೀರು ಆರ್ಚ್‌ನಲ್ಲಿ ಸರಾಗವಾಗಿ ಹೋಗುವುದಿಲ್ಲ. ಇಂತಹ ಕಡೆ ಆರ್ಚ್ ಬ್ರಿಡ್ಜ್ ಉಪಯೋಕ್ತವಲ್ಲ. ನೀರು ಸರಾಗವಾಗಿ ಹೋಗುವಂತೆ ಹೆಚ್ಚು ಜಾಗ ಬಿಟ್ಟು ಸೇತುವೆ ಕಟ್ಟಬೇಕಾಗಿದೆ. ಇದನ್ನು ಕೂಡಾ ಏಕೆ ಮಾಡಲಾರದು? ಈ ರೀತಿಯ ಬ್ರಿಡ್ಜ್ ಕಟ್ಟಲು ಕಾರಣ ಏನು ? ಇಷ್ಟು ದೊಡ್ಡ ಪ್ರಮಾಣದಲ್ಲಿ ಮಳೆ ಬರಂತ್ತದೆಂದು ಯಾರೂ ಸಹ ಯೋಚನೆ ಮಾಡಿರಲಿಲ್ಲ ಎಂದು ಕಾಣುತ್ತದೆ. ೧೯೧೧ರಲ್ಲಿ ಈ ರೀತಿಮಳೆ ಆಗಿತ್ತು ಎಂದು ಕೆಲವರು ಹೇಳಿದರೆ ಕಳೆದ ೭೫ ವರ್ಷಗಳಿಂದ ಇಂತಹ ಮಳೆ ಆಗಿಲ್ಲವೆಂದು ಕೆಲವರು ಹೇಳುತ್ತಾರೆ.

ಶ್ರೀ ಆರ್.ವಿ. ದೇಶಪಾಂಡೆ.—ನೀವು ಮಾಗಡಿರಸ್ತೆಯ ಬ್ರಿಡ್ಜ್ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೀರೆಂದು ಕಾಣುತ್ತದೆ. These are all old bridges constructed long long back.

೫-೦೦ ಪಿ. ಎಂ.

ಈ ಬ್ರಿಡ್ಜ್‌ಗೆ ಸುಮಾರು ಹಣ ವಿಚರ್ಜ್‌ಗಂತ್ತದೆ. ಇದರಲ್ಲಿ ಗೋಡು, ಟಾರು, ಡಿಸಿಲ್ಟಿಂಗ್, ಪರಿಹಾರ ಎಲ್ಲಾ ಸೇರಿ ಮಾಡಿದ್ದೀರಿ, ಬ್ರಿಡ್ಜ್ ಅಮೌಂಟ್‌ನ್ನು ಸಪರೇಟ್ ಆಗಿ ಕಳಿಸದೇ ಹೋದರ ಅಸಿಸ್ಟೆನ್ಸ್ ಬರುವುದು ಸ್ವಲ್ಪ ತೊಂದರೆ ಆಗುತ್ತದೆ. ಇದರ ಬಗ್ಗೆ ದಯವಿಟ್ಟು ನೋಡಬೇಕಾ. ರಿಲೀಫ್ ಸಹ ಬಹಳ ಕಡಿಮೆ ತೋರಿಸಿದ್ದೀರಿ. ನನಗನ್ನಿಸುತ್ತದೆ. the relief should be much more, On page-16 you have shown Gratuitions cash relief as Rs.1000/- per family.

SRI R. V. DESHPANDE:—Please see page-44 where we have given details about roadt damaged, footpaths, culverts and, bridges, buildings etc. ಬೆಂಗಳೂರು ಕಾರ್ಪೊರೇಷನ್ನಿನದ್ದು ಏನು ಡ್ಯಾಮೇಜಸ್ ಇದೆ, ಆದರ ಡಿಟೈಲ್ಸ್ ಎಲ್ಲಾ ಕೊಟ್ಟಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಹೇಳಿದ್ದರೆ ಸರಿ. I have only pointed out why you have not written about others. If it is there it is alright. ನನಗೆ ಅನುಮಾನ ಬಂತುಆದಕ್ಕೋಸ್ಕರ ಕೇಳುತ್ತಿದ್ದೇನೆ. ಇದ್ದರೆ ಸರಿ. ಪರಿಹಾರದ ವಿಷಯ ಮಾತ್ರ ಬಹಳ ಕಡಿಮೆ ಇದೆ. ೧೬ ನೇ ಪುಟದಲ್ಲಿದೆ ನೋಡಿ. ಬೇರೆಯವರು ಪರಿಹಾರ ಕೊಟ್ಟಿದ್ದಾರೆ, ಆದ್ದರಿಂದ ಸರ್ಕಾರ ಇಷ್ಟೇ ಕೊಡುವುದು ಎಂದರೆ ಕಡಿಮೆಯಾಗುತ್ತದೆ. ಕೊಟ್ಟಿರುವ ಪರಿಹಾರ ಸರಿ ಇಲ್ಲ. ನಾನು ಸೂಚನೆ ಮಾಡಿದ್ದೆ, ಏನೆಂದರೆ ಸತ್ತವರಿಗೆ ಎಷ್ಟು ಕೊಟ್ಟರೂ ಸಾಕಾಗುವುದಿಲ್ಲ ಎಂದು ೨೫ ಸಾವಿರವಾದರೂ ಕೊಡಿ ಎಂದು ಕಾರ್ಪೊರೇಷನ್‌ನಲ್ಲಿ ಪ್ಲೀಡ್ ಮಾಡಿದ್ದೆ ಇಲ್ಲಿ ಕೂಡ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಪ್ಲೀಡ್ ಮಾಡಿದ್ದೆ. ಇಷ್ಟಾದರೂ ಕೊಡಬೇಕೆಂದು ನನ್ನ ಅಭಿಪ್ರಾಯ. ಇನ್ನು ಮೂರನೇಯದು ರೂರಲ್ ಏರಿಯಾ ಬಗ್ಗೆ ಅವರು ಮಾತನಾಡಿದ್ದಾರೆ, ಗುಲ್ಬರ್ಗಾಕ್ಕೆ ನಾನೂ ಹೋಗಿದ್ದೆ. ಅನೇಕ ಜನ ರೈತರು ಬಂದು ನನಗೆ ಹೇಳಿದರು. ಪರಿಹಾರ ವಿಷಯ ಮಾತ್ರ ಅಲ್ಲ, cancel the previous loans with interest for poor and middle class people. ಇದರ ಬಗ್ಗೆಯೂ ಯೋಚನೆ ಮಾಡಿ. I think it is very essential to give loans for construction of houses to poor and marginal farmers. ಇದು ಎರಡನೇ ಸೂಚನೆ. ಮೂರನೇಯದು. ಕ್ರಾಪ್ ಇನ್ಸ್‌ಶೂರನ್ಸ್ ಜಾರಿಗೆ ತರುವ ಬಗ್ಗೆ ಯೋಚನೆ ಮಾಡಬೇಕು. ಇದನ್ನು ಕಡ್ಡಾಯ ಮಾಡಿ ಸರ್ಕಾರದವರು ಇದರ ಪ್ರೀಮಿಯಂವನ್ನು ಕೊಡಬೇಕು. ಅದನ್ನು ಯಾವರೀತಿ ಮಾಡಬೇಕೆಂದು ಯೋಚನೆ ಮಾಡಲು ಕಾರ್ಯಕ್ರಮ ತೆಗೆದುಕೊಳ್ಳಿ. ತಾವು ಇವತ್ತಿನ ದಿವಸ ಕೇಳುತ್ತಿರುವುದು ಹತ್ತಿರ ಹತ್ತಿರ ೮೦ ಕೋಟಿ ರೂಪಾಯಿಗಳಷ್ಟು. ೭೯.೬೧ ಕೋಟಿ ಎಂದು ಹೇಳಿದ್ದೀರಿ. ನನಗಂತೂ ಇದು ತೀರಾ ಕಡಿಮೆ ಅಂದಾಜು ಮಾಡಿದ್ದೀರಿ ಎಂದೆನಿಸುತ್ತದೆ. ಹೋಗಲಿ, ಅದನ್ನಾದರೂ ಪಡೆಯಬೇಕು. ಕೇಂದ್ರ ಸರ್ಕಾರದವರನ್ನು ನಾನು ತಮ್ಮ ಮೂಲಕ ಕೇಳಿಕೊಳ್ಳುವುದು ಏನೆಂದರೆ ಅದನ್ನಾದರೂ ಅವರು ತತ್‌ಕ್ಷಣ ಕೊಡಬೇಕು. ಶ್ರೀ ರಾಜೀವ್‌ಗಾಂಧಿಯವರು ಒಂದು ಕಡೆ ಹೇಳಿದ್ದಾರೆ, ಏನೆಂದರೆ, ಆದಷ್ಟು ಸಹಾಯ ಮಾಡುತ್ತೇವೆ ಎಂದು ಆದಷ್ಟು ಸಹಾಯ ಮಾಡುತ್ತೇವೆ ಎಂದು ಶ್ರೀ ಜನಾರ್ಧನ ಪೂಜಾರಿಯವರೂ ಸಹ ಹೇಳಿದ್ದಾರೆ. ಇದೆಕ್ಕೆ ನಾರ್ಮ್ಸ್ ಇರಬಹುದು, ನನಗೆ ಗೊತ್ತಿದೆ.

ಶ್ರೀ ಆರ್. ವಿ. ದೇಶಪಾಂಡೆ.—ಕೇಳುವುದರ ಬಗ್ಗೆ ಪ್ರಶ್ನೆ ಅಲ್ಲ, ಕೇಳುವಾಗ ನಾವು ಜರ್ವಾಬ್ದಾರಿಯಿಂದ ಕೇಳಬೇಕಾಗುತ್ತದೆ, ನ್ಯಾಯವಾದಷ್ಟು ಕೇಳಬೇಕಾಗುತ್ತದೆ, ಪ್ರೈಮ್ ಮಿನಿಸ್ಟರ ಫಂಡ್‌ನಿಂದ ಹಣ ಬರಬಹುದು ಎಂದು ಹೇಳಿದಿರಿ. ಇಲ್ಲವೆಂದಲ್ಲ, ಬರಬಹುದು. ೬೧ ಲಕ್ಷ ರೂಪಾಯಿಗಳನ್ನು ಪ್ರೈಮ್ ಮಿನಿಸ್ಟರ್ ರಿಲೀಫ್ ಫಂಡ್‌ನಿಂದ ಪಂಜಾಬ್, ತಮಿಳು ನಾಡಿಗೆ ಅಂತ ಬಿಡುಗಡೆ ಮಾಡಿದರು : ಇದರಲ್ಲಿ ಕರ್ನಾಟಕ್ಕೆ ಏನೂ ಬರಲಿಲ್ಲ. ಪ್ರೈಮ್ ಮಿನಿಸ್ಟರ್ ರಿಲೀಫ್ ಫಂಡ್‌ನಿಂದ ಕೇಳಲೇಬೇಕು ಎಂದೇನೂ ಇಲ್ಲ. ಬಿಹಾರ್‌ನಲ್ಲಿ ಭೂಕಂಪವಾದಾಗ ಕಾರ್ಪೊರೇಷನ್‌ನವರು ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟರು. ಪ್ರಧಾನಿಯವರು ೬೧ ಲಕ್ಷ

ರೂಪಾಯಿಗಳನ್ನು ರಿಲೀಸ್ ಮಾಡಿದರು. ಆದರೆ ನಮಗೆ ಇನ್ನೂ ದುಡ್ಡು ಕೊಟ್ಟಿಲ್ಲ. ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಕೇಂದ್ರ ಸರ್ಕಾರದ ಮಂತ್ರಿಗಳೂ ಆದ ಮಾನ್ಯ ಜನಾರ್ಧನ ಪೂಜಾರಿಯವರು ಪ್ರಧಾನಿಯವರು ರಿಲೀಫ್ ಫಂಡಿನಿಂದ ಹಣ ತರುತ್ತೇನೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ಇಲ್ಲಿಯವರೆಗೂ ಅವರಿಗೆ ತದುವುದಕ್ಕಾಗಿಲ್ಲ.

ಶ್ರೀ. ಎಂ. ವೀರಪ್ಪ ಮೊಯ್ಲಿ.— ತಮಗೆ ಗೊತ್ತಿರಬಹುದು, ಯು.ಪಿ.ಗೆ, ಹರ್ಯಾಣಕ್ಕೆ ರಿಲೀಸ್ ಮಾಡಿದ್ದಾರೆ. ಬೇಕಾದರೆ ತಮಗೆ ಈ ಬಗ್ಗೆ ವರದಿ ತರಿಸಿ, ತೋರಿಸುತ್ತೇನೆ. ಯು.ಪಿ ಚೀಫ್ ಮಿನಿಸ್ಟರ್ ಸನ್ಮಾನ್ಯ ತಿವಾರಿಯವರು ಪ್ರಧಾನಿಯವರನ್ನು ಭೇಟಿಮಾಡಿದ ಮೇಲೆ, ಮೊಮೊರ್ಯಾಂಡಮ್ ಕೊಟ್ಟ ಮೇಲೆ ರಿಲೀಸ್ ಮಾಡಿದ್ದಾರೆ. ನೀವು ಏನು ಮಾಡ ಬೇಕಾಗಿತ್ತು ಎಂದರೆ, to get relief from PrimeMinister's fund a requisition has to go from here. ಅದು ಕೇಂದ್ರ ಸರ್ಕಾರಕ್ಕೆ ಹೋಗಬೇಕಾಗುತ್ತದೆ. ಅವರು ಸಿಕ್ಕಾಪಟ್ಟೆ ರಿಲೀಸ್ ಮಾಡಿದರೆ ತಾವೇ ಏನು ಹೇಳುತ್ತೀರಿ? ಇಂಡುವಿಜುಯಲ್ ನೇಮ್‌ನಲ್ಲಿ ಎಷ್ಟೋಜನ ಸಫರ್ ಆಗಿದ್ದಾರೆ. ಆದ್ದರಿಂದ ಇಂಡಿವಿಜುಯಲ್ ನೇಮ್‌ನಲ್ಲಿ ಕೊಡಬೇಕಾಗುತ್ತದೆ. ಅಥವಾ ಸರ್ಕಾರಕ್ಕೆ ಕೊಟ್ಟು, ಸರ್ಕಾರದಿಂದ ತಾವು ಕೊಡಬೇಕಾಗುತ್ತದೆ. It has to be done like this. There are two parts. ಯಾರು ವಿಕ್ಟಿಮ್ಸ್ ಇದ್ದಾರೆ. ಅದರ ಹೆಸರಿಗೆ ಪ್ರಧಾನಮಂತ್ರಿಗಳ ಫಂಡ್‌ನಿಂದ ಡೈರಕ್ಟಾಗಿ ರಿಲೀಸ್ ಮಾಡಬೇಕಾಗುತ್ತದೆ. ಇಲ್ಲದೇ ಹೋದರೆ ತಾವು ಲಿಸ್ಟ್ ಕೊಟ್ಟಿರೆ. ಎಷ್ಟು ಗಾತ್ರದ ಹಾನಿಯಾಗಿದೆ ಎಂದು ಹೇಳಿದರೆ, ಅಷ್ಟು ರಿಲೀಸ್ ಮಾಡುತ್ತಾರೆ. ಈ ಎರಡು ಮಾಹಿತಿಯೂ ಇಲ್ಲದೇ ಹೋದರೆ ಯಾವರೀತಿ ರಿಲೀಸ್ ಮಾಡುವುದಕ್ಕಾಗುತ್ತದೆ. They want particulars. We have also discussed this matter with the Prime Minister. They said, let particulars come, we will definitely release. This is the assurance held out by the Prime Minister. ನಾವು ಅಲ್ಲಿಯೇ ಇದ್ದೆವು. ಬಿಹಾರದ ಚೀಫ್ ಮಿನಿಸ್ಟರು, ಯು. ಪಿ; ಚೀಫ್ ಮಿನಿಸ್ಟರು ಅಲ್ಲಿಯೇ ಭೇಟಿ ಮಾಡಿ ಈ ವಿಚಾರವನ್ನು ಚರ್ಚೆ ಮಾಡಿದ ಮೇಲೆ ಅಲ್ಲಿಯೇ ರಿಲೀಸ್ ಮಾಡಿದ್ದಾರೆ. This the real fact. Don·t be that uncharitable.

SRI R. V DESHPANDE.—I never challenged the bona fides of the Hon. Prime Minister. The State Government has to give figures and all that. But for giving relief from Prime Minister's relief fund, once the Prime Minister comes to know that there is some problem, it is his duty to give us. You have also advocated and your party President, who is there in the cabinet gave interview to A.I.R. and T; V. and said, I am going to get lot of funds." When you advocated he could have believed you and given the relief.

ಶ್ರೀ ಬಸವಲಿಂಗಪ್ಪ,—ಮಾನ್ಯಮಂತ್ರಿಗಳು ಏನು ಹೇಳುತ್ತಾರೆ ಎಂಬುದೇ ನಮಗೆ ತಿಳಿಯುವುದಿಲ್ಲ.

ಶ್ರೀ ಎಂ, ಮಲ್ಲಿಕಾರ್ಜುನ ಖರ್ಗೆ.— ಮೆಮೋರ್ಯಾಂಡಮ್‌ಗೆ ಮತ್ತು ಪ್ರಧಾನ ಮಂತ್ರಿಗಳ ರಿಲೀಫ್ ಫಂಡ್‌ಗೆ ಒಂದಕ್ಕೊಂದಕ್ಕೆ ಸಂಬಂಧ ಇಲ್ಲ. ತಮಗೆ ಗೊತ್ತಿರುವಹಾಗೆ, ಚೀಫ್ ಮಿನಿಸ್ಟರ್ ಫಂಡ್‌ನಿಂದ ೧೦ ಸಾವಿರ, ೨೦ ಸಾವಿರ ಕೊಡಿ ಎಂದು ಹೇಳಿದರೆ. ಯಾವರೀತಿ ಕೊಡುತ್ತಾರೆಯೋ ಅದೇ ರೀತಿ ಪ್ರಧಾನ ಮಂತ್ರಿಗಳ ಫಂಡಿನಿಂದಲೂ ಕೂಡ ೧೦ ಲಕ್ಷ ೫೦ ಲಕ್ಷ ಬರುತ್ತದೆ. ಸರ್ಕಾರದವರು ಏನು ಮಾಡಬೇಕಾಗಿತ್ತು, ಕೂಡಲೇ ಮೆಮೊರ್ಯಾಂಡಮ್ ಸಬ್‌ಮಿಟ್ ಮಾಡಿದ್ದರೆ ಅಲ್ಲಿಂದ ಟೀಮ್ ಬರುತ್ತಿತ್ತು. ಟೀಮ್ ವಿಸಿಟ್ ಮಾಡಿ, ಅಸೆಸ್‌ಮೆಂಟ್ ಮಾಡುತ್ತಾರೆ. ನಾವು ಅನೇಕ ಸಲ ಕೇಳುತ್ತೇವೆ. ಡಾಟ್‌ನಲ್ಲಿ ಫ್ಲಡ್‌ನಲ್ಲಿ ೨೦೦-೩೦೦ ಕೋಟಿ ರೂಪಾಯಿಗಳನ್ನು ಕೇಳುತ್ತೇವೆ. ಕೊನೆಗೆ ಅವರು ಎಷ್ಟು ಕೊಡುತ್ತಾರೆ ಎಂದರೆ ೧೦ ಪರ್ಸೆಂಟ್ ೨೦ ಪರ್ಸೆಂಟ್ ಕೂಡ ಕೊಡುವುದಿಲ್ಲ. ನಾವು ಮೆಮೊರ್ಯಾಂಡಮ್ ಕೊಟ್ಟು ಕೇಂದ್ರಸರ್ಕಾರದಿಂದ ಟೀಮ್ ಬರ

ಮಾಡಿಕೊಂಡು, ತನಿಖೆ ಮಾಡಿಸಿದ್ದರೆ, ನವಂಗೆ ತಕ್ಷಣ ಇಂಟೀರಿಯಮ್ ರಿಲೀಸ್ ಆದರೂ ಸಿಗುತ್ತಿತ್ತು. ಆದು ತಡವಾದ ಕಾರಣ ಇಂಟೀರಿಯಮ್ ರಿಲೀಫ್ ಕೂಡ ಬಂದಿಲ್ಲ. ನಾವು ಈ ತರಹ ಗ್ಯಾರಂಟಿ ಬಗ್ಗೆ ಹೆಚ್ಚು ಆಸಕ್ತಿ ವಹಿಸಬೇಕು. This is beneficial to the State and we should have acted very quickly.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಖರ್ಗೆಯವರು ತಕ್ಷಣ ಮೆಮೊರಾಂಡಂ ಕೊಡ ಬೇಕೆಂದು ಹೇಳಿದರು, ನಾನು ಒಪ್ಪಿಕೊಳ್ಳುತ್ತೇನೆ. Just understand from 9th to 14th there were heavy rains. This memorandum has been submitted in September itself within 15 days.

SRI M. MALLIKARJUNA KHARGE.—You could have given earlier.

SRI R. V. DESHAPANDE.—The State Government has responibility. After getting reports from DCs within 15 days the State Government has submitted the memorandum to Government of India. We have submitted in time. I am sure the Government of India will appreciate it:

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೆ, I am disclosing you ಒಂದು ಸಲ ನಾನು ರೆವಿನ್ಯೂ ಮಿನಿಸ್ಟರ್ ಆಗಿದ್ದಾಗ ಇದೇ ರೀತಿ ಹೋಗಿದ್ದೆ. ಆಗ ಈಗೇನ ಪ್ರೈಮಿಡಂಟ್ ಆಗಿದ್ದಾರೆ, ಮಾನ್ಯ ವೆಂಕಟರಾಮನ್‌ರವರು ಅವರು ಫೈನಾನ್ಸ್ ಮಿನಿಸ್ಟರ್ ಆಗಿದ್ದರು. ನಾನು ಒಂದು ಅಪ್ಲಿಕೇಷನ್ ತೆಗೆದುಕೊಂಡು ಹೋದೆ. ಮೆಮೊರಾಂಡಂ ರೆಡಿಯಾಗಿಲ್ಲ, ಮೆಮೊರಾಂಡಂ ಎಂದರೆ ನಾನೇ ಈಗ ಒಂದು ಅಪ್ಲಿಕೇಷನ್ ಥಾರಂ ತರಹ ತಂದಿದ್ದೇನೆ. ದಯವಿಟ್ಟು ಏನಾದರೂ ಸ್ಯಾಂಕ್ಷನ್ ಮಾಡಿ ಎಂದಾಗ ಅವರು ಇಮ್ಮಿಡಿಯಟ್‌ಲಿ ಆದೇ ಅಪ್ಲಿಕೇಷನ್ ಮೇಲೆ ೧೦ ಕೋಟಿ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿದರು. ಇನ್ನೂ ಮೆಮೊರಾಂಡಂ ಬರುತ್ತದೆ, ಸ್ಯಾಟಿಸ್ಟಿಕ್ಸ್ ಡೆಡಿ ಇಲ್ಲ, ಆಮೇಲೆ ಕಳಿಸುತ್ತೇನೆ ಎಂದಾಗ ಅವರು ನಾನು ಕೊಟ್ಟಿದ್ದ ಮೂರು ಪೇಜ್ ಲೆಟರ್ ಮೇಲೆ he released. Sometimes, you have to try promptly.

ಶ್ರೀ ಬಿ. ಲಕ್ಕಪ್ಪ.— ಪ್ರಾಮಾಣಿಕವಾಗಿ ಕೇಳಿದರೆ ಕೊಡುತ್ತಾರೆ, ಅದನ್ನು ಬಿಟ್ಟು ಸುಮ್ಮನೆ ವಿವಾದಕ್ಕೆ ಇವರು ಕೇಂದ್ರ ಸರ್ಕಾರವನ್ನು ಎಳೆಯುತ್ತಾರೆ.

ಅಧ್ಯಕ್ಷರು.— ಯಾವುದೇ ವಿಷಯ ಬಂದಾಗಲೂ ಮಧ್ಯದಲ್ಲಿ ನೀವು ಮಾತನಾಡುತ್ತಲೇ ಇರ ಬೇಕೆ, ದಯವಿಟ್ಟು ಕುಳಿತುಕೊಳ್ಳಿರಿ.

ಶ್ರೀ ಎಂ. ಎಸ್. ಕೃಷ್ಣನ್.— ನಾನು ಈ ವಿಚಾರ ಎತ್ತಿದ್ದು ಏತಕ್ಕೆ ಎಂದರೆ, ಟೀಕೆ ಮಾಡ ಬೇಕೆನ್ನುವ ದೃಷ್ಟಿಯಿಂದ ಎತ್ತಲಿಲ್ಲ, ಕೇಂದ್ರ ಸರಕಾರ ಸಹಾಯಕ್ಕೆ ಬರಬೇಕು ಎಂಬ ದೃಷ್ಟಿಯಿಂದ ಇವರು ೮೦ ಕೋಟಿ ರೂಪಾಯಿ ಅಸಿಸ್ಟೆನ್ಸ್ ಕೇಳಿರುತ್ತಾರೆ. ಅಸಿಸ್ಟೆನ್ಸ್ ಕೇಳುವುದಕ್ಕೆ ವಂಚಿಯೇ ಅವರು ಕೊಡುವುದಕ್ಕೆ ಆಗುತ್ತಿರಲಿಲ್ಲವೇ ?

ಶ್ರೀ ಎಂ. ವೀರಪ್ಪ ಮೊಯಿಲಿ.— ಕೇಳುತ್ತಿದ್ದಾರೆ. ಇನ್ನೂ ಕೇಳಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ಮೆಮೊರಾಂಡಂ ಕಳುಹಿಸಿದ್ದಾರೆಂದರೆ ಕೇಳಿದ್ದಾರೆ ಎಂದು ಅರ್ಥ ಇದು ಇವತ್ತು ಶುರುವಾಗಿಲ್ಲ. ಕೇಳಿದ್ದು ಒಳ್ಳೆಯದೇ ಆಯಿತು. ಆದರೆ ಕೇಳದೇ ಹೋದಾಗಲೂ ಸಹ ಕೇಂದ್ರ ಸರಕಾರದವರು ಕೊಡುವುದಕ್ಕೆ ಆಗುತ್ತಿರಲಿಲ್ಲವೇ ? ತಕ್ಷಣ ನವಂಗೆ ಏನಾದರೂ ಇಂಟೀರಿಯಂ ರಿಲೀಫ್ ಕೊಡುವುದಕ್ಕೆ ಅವರಿಗೆ ಆಗುತ್ತಿರಲಿಲ್ಲವೇ ಎಲ್ಲರೂ ಬಂದಿದ್ದರು. ಶ್ರೀಮಾನ್ ಜಾಫರ್ ಷರೀಫ್‌ರವರು ಬಂದಿದ್ದರು. ಬಂದು ಸಂತಾಪ ಸೂಚಿಸಿದರು. ಎಲ್ಲಾ ಮಾಡಿದರು. ಅದನ್ನು ನಾವು ಅಪ್ರಿಷಿಯೇಟ್ ಮಾಡಿದೆವು. ಅದರಲ್ಲಿ ತಪ್ಪೇನೂ ಇಲ್ಲ. ಹಾಗೇ ಬೇರೆಯವರೂ ಬಂದರು. ಅವರೆಲ್ಲಾ ಬಂದಮೇಲೆ, ಪ್ರಧಾನಿಯವರು ಸ್ವಲ್ಪ ಕಾಳಜಿ ವಹಿಸಿ ಪರಿಹಾರ ಕೊಟ್ಟಿದ್ದರೆ ಜನ ಮೆಚ್ಚುತ್ತಿದ್ದರು ಪ್ರೈಮ್ ಮಿನಿಸ್ಟರ್ ರಿಲೀಫ್ ಫಂಡ್‌ನಿಂದ ನೆರವು ಕೊಡಬಹುದಾಗಿತ್ತು. ಯಾವ ಹೆಡ್, ಯಾವ ಫಂಡ್, ಯಾವ ಅಕೌಂಟ್ ಆ ಪ್ರಶ್ನೆ ಇಲ್ಲಿ ಇಲ್ಲ.

ಜನ ಸಾಯುತ್ತಿರಬೇಕಾದರೆ ತಕ್ಷಣ ತೆಗೆದುಕೊಳ್ಳಿ ಎಂದು ಅಸಿಸ್ಟೆನ್ಸ್ ಕೊಡಬಹುದಾಗಿತ್ತು. ಆಮೇಲೆ ಮೆಮೊರಾಂಡಂ ಪಡೆದು ಪೂರ್ತಿ ಶೀರ್ಮಾನ ಮಾಡಬಹುದಾಗಿತ್ತು. ನಾಮ್ಸ್ ಆಧಾರದ ಮೇಲೆ ಮಾಡಬಹುದಾಗಿತ್ತು. ಆದರೆ ತಕ್ಷಣ ಮಾಡದೇ ಇರುವುದು ನನಗೆ ಆಶ್ಚರ್ಯವಾಗಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಇವರು ಕೇಳದೇ ಅವರು ಬಂದು ಕೊಟ್ಟುಬಿಡಲಿ, ಅವರು ಕೊಟ್ಟ ತಕ್ಷಣ ಇವರು ರಾಜಕೀಯ ಮಾಡುವುದಕ್ಕೆ ಬಂದರು ಎಂದು ಹೇಳಲಿ.

ಶ್ರೀ ಎಂ. ಎಸ್. ಕೃಷ್ಣನ್.— ಈಗ ಜಾಫರ್ ಷರೀಫ್‌ರವರು ಬಂದರು, ಯಾರೂ ರಾಜಕೀಯ ಎಂದು ಹೇಳಲಿಲ್ಲ. ಒಳ್ಳೆಯದು ಎಂದು ಹೇಳಿದರು. ಅವರು ಬಂದಿದ್ದು ಒಳ್ಳೆಯದು ಎಂದು ಹೇಳಿದರು. ಆದುದರಿಂದ ರಾಜಕೀಯದ ಪ್ರಶ್ನೆ ಇಲ್ಲಿ ಬರುವುದಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ.— ನಾವು ಜಾಫರ್ ಷರೀಫ್‌ರವರನ್ನು ಕಾಂಪ್ಲಿಮೆಂಟ್ ಮಾಡಿರುತ್ತೇವೆ. ಮಾನ್ಯ ಕೇಂದ್ರ ಸಚಿವರು ನಾವು ಕೇಳದೆ ಇದ್ದರೂ ಬಂದು ಎಲ್ಲಾ ಕಡೆ ಭೇಟಿ ನೀಡಿ ಸಹಾಯ ಮಾಡಿದರು. ಇಮ್ಮೀಡಿಯಟ್‌ಲಿ ಬಂದು ನಮ್ಮ ಅಧಿಕಾರಿಗಳನ್ನೂ ಕರೆಸಿ ಕೋಲ್ ಇಂಡಿಯಾದವರನ್ನು ಇನ್‌ವಾಲ್ ಮಾಡಿ ಅವರ ಮೂಲಕ ಸಹಾಯ ಮಾಡಿದ್ದಾರೆ. We complained about Sri Poojari. We have only said.....

(Interruption)

He said, I am going to release money and get from the prime Minister's Relief Fund.

ಶ್ರೀ ಧರ್ಮಸಿಂಗ್.— ಅವರೂ ಬರಲಿಲ್ಲವೇ, ಬಂದು ಎಲ್ಲಾ ಕಡೆಗೆ ಹೋಗಲಿಲ್ಲವೇ ?

ಶ್ರೀ ಆರ್. ವಿ. ದೇಶಪಾಂಡೆ.— ಸಹಾಯ ಬರಲಿಲ್ಲ ಎಂದು ನಾನು ಹೇಳಿದ್ದು.

ಶ್ರೀ ಧರ್ಮಸಿಂಗ್.— ಮೆಮೊರಾಂಡಂ ಕೊಡಿರಿ ಎಂದು ಅವರು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ದೇಶಪಾಂಡೆಯವರಿಗೆ ಬೇರೆ, ಲಕ್ಷ್ಮೀಸಾಗರ್‌ರವರಿಗೆ ಬೇರೆ, ಬೊಮ್ಮಾಯಿಯವರಿಗೆ ಬೇರೆ ಎಂದು ಸಹಾಯ ಮಾಡುವುದಕ್ಕೆ ಆಗುತ್ತದೆಯೇ ? ಗೌರ್ನಮೆಂಟ್ ಎಂದರೆ ಒಂದೇ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.— ನಾನು ಏನು ಹೇಳುತ್ತಿದ್ದೇನೆ ಎಂದರೆ ಎಲ್ಲವನ್ನೂ ನೋಡಿದ ಜನಾರ್ಧನಪೂಜಾರಿಯವರು ದೂರದರ್ಶನಕ್ಕೆ ಇಂಟರ್‌ವ್ಯೂ ಕೊಟ್ಟರು ಎ. ಐ. ಆರ್.ಗೆ ಇಂಟರ್‌ವ್ಯೂ ಕೊಟ್ಟರು. ಸೆಪ್ಟೆಂಬರ್ ೧೨ನೇ ತಾರೀಖು ಕೊಟ್ಟರು. He has promised to get funds form the P.M.s relief fund. ಆದರೆ ಅದು ಬರಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ನನ್ನ ಅಪ್ರೋಚ್ ಇಷ್ಟೇ. ಪ್ರಧಾನಿಯವರು ಅಸ್ಸಾಂಗೆ ಹೋಗಿದ್ದಾರೆ, ಎಲ್ಲಾಕಡೆ ಹೋಗಿ ನೋಡಿಕೊಂಡು ಬಂದರು. ಇಮ್ಮೀಡಿಯಟ್‌ಲಿ ೨೦ ಕ್ರೋರ್ಸ್ ರಿಲೀಸ್ ಮಾಡಿದರು. ಆಮೇಲಿಂದ ಮೆಮೊರಾಂಡಂ ಕೊಟ್ಟ ಮೇಲೆ ಇನ್ನೂ ಜಾಸ್ತಿ ಕೊಟ್ಟಿದ್ದಾರೆ, ಅದು ಬೇರೆ ಸಮಾಚಾರ. If it could be done in Assam why not in Karnataka ? ಇದು ಏನು ಕಾರಣ ಇರಬಹುದು, ಇದು ಸಮಾಧಾನಕರವಾಗಿಲ್ಲ ಎಂದು ಮಾತ್ರ ಹೇಳಬಹುದು. ಇಲ್ಲಿ ರಾಜಕೀಯ ಬರುವುದಿಲ್ಲ, ಪಾರ್ಟಿ ಪ್ರಶ್ನೆ ಬರುವುದಿಲ್ಲ. ರಾಜಕೀಯದ ಪ್ರಶ್ನೆ ಬರುವುದಿಲ್ಲ. ಯಾವ ಪಾರ್ಟಿ ಬೇಕಾದರೂ ಆಗಿರಲಿ.

ಅಧ್ಯಕ್ಷರು.— ಕೃಷ್ಣನ್‌ರವರೇ ಬೇಗ ಮುಕ್ತಾಯ ಮಾಡಿರಿ. ಉಮರಬ್ಬನವರೇ ನಿಮ್ಮ ಹೆಸರೂ ಇದೆ. ಸುಮ್ಮನೆ ಏತಕ್ಕೆ ಮಧ್ಯೆ ಇಂಟರ್‌ವೀನ್ ಮಾಡುತ್ತೀರಿ ? ಕೃಷ್ಣನ್‌ರವರೇ, ತಾವು ಮುಕ್ತಾಯ ಮಾಡಿ.

ಮಾನ್ಯ ಉಮರಬ್ಬ ಅವರಿಗೆ ಬೇರೆ ಏನೂ ಕೆಲಸ ಇದ್ದಂತೆ ಕಾಣಿಸುವುದಿಲ್ಲ. ಅವರೇನು ಹೇಳುತ್ತಾರೆನ್ನುವುದು ಕೇಳುವುದಕ್ಕೆ ತಾವು ತಯಾರು ಇಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—೪೦ ಕೋಟಿ ರೂಪಾಯಿಗಳಷ್ಟು ಹಾನಿಯಾಗಿದೆ ಎಂದು ಹೇಳಿದ್ದೀರಿ. ಆದರೆ ಅದಕ್ಕಿಂತ ಹೆಚ್ಚು ನಷ್ಟವಾಗಿದೆ. ಪರಿಹಾರ ರೂಪದಲ್ಲಿ ಎಷ್ಟು ಹಣ ಕೊಡಬೇಕಾಗಿತ್ತೋ ಅಷ್ಟು ಹಣ ಕೊಟ್ಟಿಲ್ಲ. ಪರಿಹಾರ ಹಣ ಬಹಳ ಕಡಿಮೆ. ಮೊನ್ನೆ ಕಾರ್ಪೊರೇಷನ್‌ನಲ್ಲಿ ಈ ವಿಷಯದ ಬಗ್ಗೆ ಗಲಾಟೆಯಾಯಿತಂ. ಬೆಂಗಳೂರು ನಗರಕ್ಕೆ ಸುಮಾರು ೬ ಕೋಟಿ ರೂಪಾಯಿಗಳನ್ನು ರಿಲೀಜ್ ಮಾಡಿದ್ದೀರಿ. ೬ ಕೋಟಿ ರೂಪಾಯಿಗಳು ಏನೇನೂ ಸಾಲದಂ. ಇನ್ನೂ ಜಾಸ್ತಿ ಹಣ ಕೊಡಬೇಕೆಂದು ಅವರು ಕೇಳಿದ್ದಾರೆ. ಇದರ ಜೊತೆಗೆ ಕೇಂದ್ರ ಸರ್ಕಾರದವರು ಸಹ ಕೊಡಬೇಕು. ಕೇಂದ್ರ ಸರ್ಕಾರದ ಮೇಲೆ ನೀವು ಒತ್ತಾಯ ತೆಗೆದುಕೊಂಡು ಬನ್ನಿ. ಆ ಕಡೆಯ ಮಾನ್ಯ ಸದಸ್ಯರು ಒತ್ತಾಯ ತರುತ್ತಾರೆ. ಒತ್ತಾಯ ತಂದರೆ ಸಂತೋಷ. ನಮ್ಮ ಸಹಾಯ ಬೇಕಾದರೂ ನಾವು ಸಹ ಕೊಡುತ್ತೇವೆ. ಮೊನ್ನೆ ವೆಸ್ಟ್ ಬೆಂಗಾಲ್‌ನಲ್ಲಿ ಬಂದ್ ಮಾಡಿದರು. ಅದಕ್ಕೆ ೬೦ ಕೋಟಿ ರೂಪಾಯಿಗಳು ಬಂತು. ನಾನ್ ಕಾಂಗ್ರೆಸ್ ರಾಜ್ಯಗಳಿಗೆ ತಾರತಮ್ಯ ಮಾಡುವುದು ಬೇಡ.

(ಗೊಂದಲ)

(ನಾಲ್ಕೈದು ಜನಮಾನ್ಯ ಸದಸ್ಯರು ಎದ್ದು ನಿಂತು ಮಾತನಾಡಿದರು)

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ. ಅವರಿಗೆ ವಾಕ್ ಸ್ವಾತಂತ್ರ್ಯ ಇದೆ. ಅವರು ಮಾತನಾಡುತ್ತಾರೆ.

ಶ್ರೀ ಎಂ.ಎಸ್. ಕೃಷ್ಣನ್.—ವಾರ್ ಪುಟ್ಟಿಂಗ್‌ನಲ್ಲಿ ಕೆಲಸ ಆಗಬೇಕು. ಆದು ಬಿಟ್ಟು ಬರೀ ವಾರ್ ಪೀಸ್ ಮಾಡಿದರೆ ತೊಂದರೆಯಾಗುತ್ತದೆ. ರಾಜ್ಯಕ್ಕೆ ಕೇಂದ್ರ ಸರ್ಕಾರವು ಸಹ ಸಹಾಯ ಮಾಡಿದರೆ ಅನುಕೂಲವಾಗುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಅತಿವೃಷ್ಟಿಯಿಂದಾಗಿ ವಿಪರೀತ ಮಳೆಯಿಂದಾಗಿ ಆದ ಹಾನಿ ಬಗ್ಗೆ ನಾವಿಲ್ಲಿ ರಾಜಕೀಯ ಸಮಸ್ಯೆ ತರುವುದು ಬೇಡ. ಮಾನ್ಯ ಕಾಂಗ್ರೆಸ್ ಪಕ್ಷದ ಸಹೋದರರನ್ನು ನಾನು ಕೇಳಿಕೊಳ್ಳುವುದೇ ನೆಂದರೆ...

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಪರಿಹಾರ ವಿಷಯದಲ್ಲಿ ಸಾಕಷ್ಟು ಕಷ್ಟನಷ್ಟ ಅನುಭವಿಸುತ್ತಿರುವಂತಹ ವಿಚಾರವನ್ನು ನಾವು ಮಾತನಾಡುತ್ತಿರುವಾಗ ಕೇಂದ್ರ ಸರ್ಕಾರವನ್ನು ಆ ಬಗ್ಗೆ ಒತ್ತಾಯ ಮಾಡುತ್ತಿರುವಾಗ ಇಲ್ಲಿ ಕೆಲವರು ಕಾಂಗ್ರೆಸ್ ಪಕ್ಷ, ಕೇಂದ್ರ ಸರ್ಕಾರ ಎಂದು ಸೇರಿಸಿಕೊಂಡು ರಾಜಕೀಯ ಮಾಡಬಾರದು? ಮಾನ್ಯ ಸದಸ್ಯರಾದ ಕೃಷ್ಣನ್‌ರವರ ಸಹ ಅದೇ ಮಾಡಿದರು...

ಶ್ರೀ ಎಂ.ಎಸ್. ಕೃಷ್ಣನ್.—ನನ್ನ ಬೇಳೆ ಬೇಯಿಸಿಕೊಳ್ಳಲು ನಾನು ಹೇಳಲಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.—ವೆಸ್ಟ್‌ಬೆಂಗಾಲ್ ವಿಚಾರ ಏತಕ್ಕೆ ಇಲ್ಲಿ ಬಂತು? ಪರಿಹಾರ ಬೇಕಾದುದು ನಮ್ಮ ರಾಜ್ಯ ಸರ್ಕಾರಕ್ಕೆ, ಇದರ ಬಗ್ಗೆ ನಾವು ಗಮನ ಕೊಡಬೇಕು. ವೆಸ್ಟ್ ಬೆಂಗಾಲ್ ವಿಚಾರ ಏತಕ್ಕೆ ಬೇಕು.

(ಗೊಂದಲ)

ಶ್ರೀ ಎಂ.ಎಸ್. ಕೃಷ್ಣನ್.—ಇದರಲ್ಲಿ ರಾಜಕೀಯ ಏನೂ ಇಲ್ಲ. ಕೇಂದ್ರ ಸರ್ಕಾರ ಪರಿಹಾರ ಕೊಡುವಂತೆ ಮಾಡಿ ಎಂದು ಹೇಳಿದ್ದು ತಪ್ಪೇ?

ಅಧ್ಯಕ್ಷರು.—ವೆಂಕಟರಾಮಯ್ಯನವರೇ ತಾವು ಮಾತನಾಡಿ, ದಯವಿಟ್ಟು ತಾವು ವಿಷಯಕ್ಕೆ ಸಂಬಂಧಪಟ್ಟಂತೆ ಮಾತನಾಡಿ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಇದು ಮಾನವೀಯತೆ ದೃಷ್ಟಿಯಿಂದ ನೋಡಬೇಕಾಗಿರುವ ಸಮಸ್ಯೆ, ನಾನು ರಾಜಕೀಯ ಮಾಡುವುದು ಇಷ್ಟೇ. ತಾವು ಸಹಕರಿಸಿ ಬೇಗನೆ ಹಣ ರಿಲೀಜ್ ಮಾಡಿಸಿ. ನಾವು ನಿಮಗೆ ಥ್ಯಾಂಕ್ಸ್ ಹೇಳುತ್ತೇವೆ.

(ಗೊಂದಲ)

ಶ್ರೀ ಕೆ.ಜಿ. ಜಾರ್ಜ್.—ಕೇಂದ್ರ ಸರ್ಕಾರ ಈಗಾಗಲೇ ಸಹಾಯ ಮಾಡಿದೆ.

ಶ್ರೀ ಆರ್. ವೆಂಕಟರಾವಯ್ಯ —ಕೇಂದ್ರ ಸರ್ಕಾರದವರು ಅವರ ಅಪ್ಪನ ಮನೆಯಿಂದ ಏನೂ ಹಣ ಕೊಡುವುದಿಲ್ಲ. ನಮ್ಮ ಫಂಡ್ಸ್ ಅಲ್ಲಿರುತ್ತದೆ, ಅದನ್ನೇ ರಾಜ್ಯ ಸರ್ಕಾರಗಳಿಗೆ ಕೊಡುತ್ತಾರೆ. ಇದನ್ನು ಯಾರೇ ಆಗಲಿ ಮಾನವೀಯಂತೆ ದೃಷ್ಟಿಯಿಂದ ನೋಡಬೇಕು. ನಾವೆಲ್ಲ ಇರುವುದು ಇಂಡಿಯಾ ದೇಶದಲ್ಲಿಯೇ. ಈ ದೇಶದ ಜನತೆಗೆ ಸಹಾಯ ಮಾಡುವ ಕರ್ತವ್ಯ ಕೇಂದ್ರ ಸರ್ಕಾರದ್ದು, ಅದು ಸಹಾಯ ಮಾಡಬೇಕು. ಈ ಬಗ್ಗೆ ಕರ್ನಾಟಕ ಸರ್ಕಾರ ಸಹ ವಾರ್ ಫುಟ್ಟಿಂಗ್‌ನಲ್ಲಿ ಕೆಲಸ ಮಾಡಬೇಕೆಂದು ಹೇಳುತ್ತೇನೆ. ಇದರಲ್ಲಿ ರಾಜಕೀಯವನ್ನು ನಾವ್ಯಾರು ಬೆರೆಸುತ್ತಿಲ್ಲ. ಈ ಬಗ್ಗೆ ಮಾನ್ಯ ದೇಶಪಾಂಡೆಯವರು ಮಂತ್ರಿ ಲೋಕೋಪಯೋಗಿ ಸಚಿವರು ಮತ್ತು ಇತರೆ ನಮ್ಮ ನಾಯಕರಾದ ಪೊಯ್ಲಿಯವರನ್ನು ನಾಗರತ್ನಮ್ಮನವರನ್ನು ಕರೆದುಕೊಂಡು ಹೋಗಿ ಬೇಗನೆ ಹಣ ತೆಗೆದು ಕೊಂಡು ಬಂದರೆ ಒಳ್ಳೆಯದು. ಇದರಲ್ಲಿ ಯಾರೂ ಪ್ರೆಸ್ಟೀಜ್ ಇಶ್ಯೂ ಮಾಡುವುದು ಬೇಡ. ನಷ್ಟದ ಬಗ್ಗೆ ತಾವು ಕೊಟ್ಟಿರುವ ಮಾಹಿತಿ ಬಹಳ ಕಡಿಮೆ. ಬರೀ ೮೦ ಕೋಟಿ ರೂಪಾಯಿಗಳೆಂದು ಹೇಳಿದ್ದೀರಿ. ಕೋಲಾರ ಜಿಲ್ಲೆಯಲ್ಲಿ ಮಳೆ ಬಂದು ಎಷ್ಟು ಹಾನಿ ಆಗಿದೆ ಎಂಬ ಬಗ್ಗೆ ಫಿಗರ್‌ಗಳನ್ನು ಇಲ್ಲಿ ಕೊಟ್ಟಿದ್ದಾರೆ. ಇವರು ಸೆಪ್ಟೆಂಬರ್ ೧೫ನೇ ತಾರೀಖು ಈ ಫಿಗರ್‌ಗಳನ್ನು ತರಿಸಿಕೊಂಡಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ಒಟ್ಟು ೧ ಕೋಟಿ ೨೭ ಲಕ್ಷ ರೂಪಾಯಿಗಳು ನಷ್ಟವಾಗಿದೆಯೆಂದು ಅಲ್ಲಿನ ಅಧಿಕಾರಿಗಳು ಬರೆದು ಕಳುಹಿಸಿದ್ದಾರೆ. ಮಾನ್ಯ ಅಧ್ಯಕ್ಷರೆ, ಇದು ಹೋದ ತಿಂಗಳು ಮಳೆ ಬಂದು ಹಾನಿ ಸಂಭವಿಸಿದ ಲೆಕ್ಕ. ಈ ತಿಂಗಳ ಎರಡನೇ ತಾರೀಖು ಕೂಡ ಮಳೆ ಬಂದು ಟ್ಯಾಂಕ್‌ಗಳು ಬ್ರೀಚ್ ಆಗಿವೆ. ಮನೆಗಳು ಬಿದ್ದು ಹೋಗಿವೆ ನಿನ್ನೆ ದಿವಸ ಕೂಡ ಮಳೆ ಬಿದ್ದಿದೆ. ಕಂಟಿನ್ಯೂಯಸ್ ಆಗಿ ಬೀಳುವ ಮಳೆಯಿಂದ ಅನೇಕ ಮನೆಗಳು ಬಿದ್ದು ಹೋಗಿವೆ. ಮಂಚಬಾಗಿಲು ತಾಲ್ಲೂಕು ಒಂದರಲ್ಲೆ ೩೦ ಮನೆಗಳು ಬಿದ್ದು ಹೋಗಿವೆ. ಕೋಲಾರ ತಾಲ್ಲೂಕಿನಲ್ಲಿ ಒಂದು ಕೆರೆ ಒಡೆದುಹೋಗಿದೆ. ನಮ್ಮ ಜಿಲ್ಲೆಯಲ್ಲಿ ವಿಪರೀತ ನಷ್ಟವಾಗಿದೆ. ಗೌರಿಬಿದನೂರು ಮತ್ತು ಶಿಡ್ಲಘಟ್ಟ ತಾಲ್ಲೂಕುಗಳಲ್ಲಿ ಬದ್ದ ಮಳೆಯಿಂದ ಕೆರೆಗಳೇ ಕೊಚ್ಚಿಹೋಗಿವೆ. ನಮ್ಮ ಕೋಲಾರ ಜಿಲ್ಲೆಯಲ್ಲಿ ಒಟ್ಟು ೪೦೦ ಕೆರೆಗಳಿವೆ. ಇವುಗಳಲ್ಲಿ ಕೆಲವು ಒಡೆದು ಹೋಗಿವೆ. ಅನೇಕ ಕೆರೆಗಳು ಬ್ರೀಚ್ ಆಗಿವೆ. ಇಷ್ಟೊಂದು ತೊಂದರೆಗಳು ನಮ್ಮ ಕೋಲಾರ ಜಿಲ್ಲೆಯಲ್ಲಿ ಆಗಿದ್ದರೂ ಕೂಡ ಸರ್ಕಾರ ಕಣ್ಣು ಬಿಚ್ಚಿಲ್ಲ ಯಾವ ಸಹಾಯವನ್ನೂ ಮಾಡುತ್ತಿಲ್ಲ. ಸರ್ಕಾರವನ್ನು ಕೇಳಿದರೆ ಪಿ.ಡಬ್ಲ್ಯೂ.ಡಿ., ಇಲಾಖೆಗೆ ಆದೇಶ ಕೊಟ್ಟಿದ್ದೇವೆ. ಎಲ್ಲಾ ಕೆಲಸವನ್ನು ಅವರು ಮಾಡುತ್ತಾರೆಂದು ಹೇಳುತ್ತಾರೆ. ಪಿ.ಡಬ್ಲ್ಯೂ.ಡಿ. ಇಲಾಖೆಯವರ ಹತ್ತಿರ ಹೋಗಿ ಕೇಳಿದರೆ, ಎಲ್ಲಾ ಕೆಲಸಗಳು ಜಿಲ್ಲಾಪರಿಷತ್ತಿನ ವ್ಯಾಪ್ತಿಗೆ ಬರುವುದರಿಂದ ಅಲ್ಲಿ ಸಂಪರ್ಕ ಮಾಡಿ ಎಂದು ಹೇಳುತ್ತಾರೆ ಜಿಲ್ಲಾಪರಿಷತ್ತಿನಲ್ಲಿ ಕೇಳಿದರ ನಮ್ಮ ಹತ್ತಿರ ಫಂಡ್ಸ್ ಇಲ್ಲವೆಂದು ಹೇಳುತ್ತಾರೆ, ಹೋದಸಾರಿಯ ಫ್ಲಡ್ ರಿಲೀಫ್ ಕಾಮಗಾರಿಗೇ ಇನ್ನೂ ಸರ್ಕಾರದಿಂದ ಕೊಟ್ಟಿಲ್ಲ ಇನ್ನು ಹೊಸ ಕೆಲಸಗಳಿಗೆ ಎಲ್ಲಿಂದ ದುಡ್ಡು ತರುವುದು ಎಂದು ಕೇಳುತ್ತಾರೆ. ಮಾನ್ಯ ದೇವೇಗೌಡರು ಮಂತ್ರಿ ಜಿಲ್ಲಾಪರಿಷತ್ತಿಗೆ ಸಂಬಂಧಪಟ್ಟ ಮಂತ್ರಿಯವರು ಸಭೆಯಲ್ಲಿ ಇದ್ದಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಅವರು ಅರ್ಥ ಮಾಡಿಕೊಂಡು ಸ್ವಲ್ಪ ಮಟ್ಟಿಗೆ ಕೆಲಸಗಳನ್ನು ಮಾಡಿ ಸುತ್ತಿದ್ದರು.

ಶ್ರೀ ಕೆ. ಎಸ್. ನಾಗರತ್ನಮ್ಮ.—ದೇವೇಗೌಡರು ವೋಟಿಂಗ್ ಕರೆದಿದ್ದಾರೆಂದು ನಾವು ಬೆಳಿಗ್ಗೆ ೮ ಗಂಟೆಗೆ ಮನೆ ಬಿಟ್ಟು ಬಂದವರು. ೬ ಗಂಟೆ ಆದರೂ ಇನ್ನೂ ನಾವು ಮನೆಗೆ ಹೋಗದಿದ್ದರೆ ಹೇಗೆ ? ನಾಳೆಗೆ ಮುಂದುವರಿಸಿ.

ಅಧ್ಯಕ್ಷರು.—ಇವರು ಮಾತನಾಡಿದ ಮೇಲೆ, ಧರ್ಮಸಿಂಗ್‌ರವರು ಮಾತನಾಡಲಿ. ಆಮೇಲೆ ನೋಡೋಣ.

ಶ್ರೀ ಆರ್. ವೆಂಕಟರಾವಯ್ಯ.—ಮಾನ್ಯ ಅಧ್ಯಕ್ಷರೇ. ಜಿಲ್ಲಾಪರಿಷತ್ತಿನವರಿಗೆ ಒಂದು ಹೆಡ್ ಆಫ್ ಅಕೌಂಟ್‌ನ್ನು ಕೊಟ್ಟಿಲ್ಲ. ಅವರು ಫ್ಲಡ್ ರಿಲೀಫ್ ಫಂಡ್ಸ್‌ನ್ನು ಇಡುವುದಕ್ಕೆ ಒಂದು ಅಕೌಂಟ್ ತೆರೆದಿಲ್ಲ ಮೊದಲೆ ಹೇಗೆ ? ಜಿಲ್ಲಾಪರಿಷತ್ತುಗಳು ಹೇಗೆ ಕೆಲಸ ಮಾಡಬೇಕು ? ನಾನು ಇದೆಲ್ಲಾ ಹೇಳುವುದನ್ನು ಸಂಬಂಧಪಟ್ಟ ಮಂತ್ರಿಗಳು ನೋಟ್ ಮಾಡಿಕೊಂಡಿದ್ದರೆ ಸ್ವಲ್ಪ ಅನುಕೂಲವಾಗುತ್ತಿತ್ತು. ಕೊನೇ ಪಕ್ಷ ಪಿ.ಡಬ್ಲ್ಯೂ.ಡಿ. ಇಲಾಖೆಯ ಚೀಫ್ ಇಂಜನೀಯರ್ ಆದರೂ ಇಲ್ಲಿ ಕುಳಿತುಕೊಳ್ಳಬೇಕೆಂದು ತಾವು ಸೂಚನೆ ಕೊಡಬೇಕು. ನಾವು ಇಷ್ಟೆಲ್ಲಾ ಹೇಳುತ್ತಿರುವುದೂ

ಪ್ರಯೋಜನವಿಲ್ಲದಂತೆ ಆಗುವುದು. ಈಗಾಗಲೇ ಮಂತ್ರಿಗಳು ಪ್ರಿಪೇರ್ಡ್ ಸ್ಟೇಟ್‌ಮೆಂಟ್‌ನ್ನು ಇಟ್ಟುಕೊಂಡಿದ್ದಾರೆಂದು ಕಾಣುತ್ತದೆ. ನಾವೆಲ್ಲಾ ಮಾತನಾಡಿದ ಮೇಲೆ ಆ ಪ್ರಿಪೇರ್ಡ್ ಸ್ಟೇಟ್‌ಮೆಂಟ್‌ನ್ನು ಓದಿಬಿಡುತ್ತಾರೆ. ಮಾನ್ಯ ಅಧ್ಯಕ್ಷರೇ, ನಾನು ಹೇಳುವುದೇನೆಂದರೆ, ಜಿಲ್ಲಾಪರಿಷತ್ತಿಗೆ ಕೊಡುವ ಹಣದಲ್ಲಿ ೧೦ ಪರ್‌ಸೆಂಟ್‌ನಷ್ಟು ಹಣವನ್ನು ನ್ಯಾಚುರಲ್ ಕಲಾಮಿಟಿಗೆ ಡೈವರ್ಟ್ ಮಾಡಿಕೊಳ್ಳಬಹುದೆಂದು ಹೇಳುತ್ತಾರೆ, ಆದರೆ, ೧೦ ಪರ್‌ಸೆಂಟ್‌ನಷ್ಟು ಹಣ ಇಲ್ಲವೆಂದು ಜಿಲ್ಲಾಪರಿಷತ್ತಿನವರು ಹೇಳುತ್ತಾರೆ, ನಮಗೆ ಆಕ್ಯುಯಲ್ ಆಗಿ ರಿಲೀಫ್ ಸಿಗುತ್ತಿಲ್ಲ. ನಮಗೆ ಬೇಕಾಗಿರುವುದು ರಿಲೀಫ್. ಆದ್ದರಿಂದ, ಇನ್ನು ಮುಂದೆ ೧೦ ಪರ್‌ಸೆಂಟ್‌ನಷ್ಟು ಹಣವನ್ನು ಜಿಲ್ಲಾಪರಿಷತ್ತುಗಳಿಗೆ ಬಿಡುಗಡೆ ಮಾಡಿ. ಅದು ಬಿಟ್ಟು ೧೦ ಪರ್‌ಸೆಂಟ್ ರಿಲೀಫ್ ಕೊಡುತ್ತೇವೆಂದು ಆಕಾಶ ತೋರಿಸಿ ಕೊಡದೇ ಹೋದರೆ ಯಾರೂ ಒಪ್ಪುವುದಿಲ್ಲ. ನಾನು ಈಗಲಾದರೂ ಹೇಳುತ್ತೇನೆ, ಏನೆಂದರೆ, ಈ ಒಂದು ಗಂಭೀರ ಸಮಸ್ಯೆಯು ಕೇವಲ ಜನತಾ ಪಕ್ಷದ್ದಲ್ಲ, ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದ್ದೂ ಅಲ್ಲ, ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದೂ ಅಲ್ಲ, ಇದು ಕರ್ನಾಟಕದ ಎಲ್ಲಾ ಜನರ ಸಮಸ್ಯೆಯಾಗಿದೆ. ಆದುದರಿಂದ ನೊಂದವರಿಗೆ ತತ್‌ಕ್ಷಣ ಪರಿಹಾರ ಕೊಡಲು ಫಂಡ್ಸ್ ರಿಲೀಸ್ ಮಾಡಿ ಸಹಾಯ ಮಾಡಬೇಕು. ಮಳೆಯಿಂದಾಗಿ ಪೊದಲೇ ಕೆಟ್ಟು ಹೋಗಿದ್ದ ರಸ್ತೆಗಳ ಅವಸ್ಥೆಯಂತೂ ಈಗ ನೋಡುವುದಕ್ಕಾಗುವುದಿಲ್ಲ. ಟಾರ್‌ರೋಡ್ಸ್ ಬಿಟ್ಟು, ಕಂಟ್ರಿ ರೋಡ್ಸ್, ಟೇಕನ್ ಓವರ್ ರೋಡ್ಸ್, ಐವಿಸಿ ರೋಡ್ಸ್, ಯಾವುದೂ ಸರಿಯಾಗಿ ಇಲ್ಲ. ಅದರ ಬಗ್ಗೆ ಯಾರೂ ಕೂಡ ಯೋಚನೆ ಮಾಡಿದ ಹಾಗೆ ಕಾಣುವುದಿಲ್ಲ. ಇದ್ದ ರೋಡ್ ಕಲ್ವರ್ಟ್‌ಗಳು ಸಹ ಕಿತ್ತು ಹೋಗಿವೆ. ಇನ್ನು ಬೆಳಿಗಳ ಪಾಡು ಹೇಳತೀರದು. ಸತತವಾಗಿ ಬಿದ್ದ ಮಳೆಯಿಂದಾಗಿ ಕಡಲೇಕಾಯಿ ಗಿಡದಲ್ಲಿ ಕಾಯಿ ಆಗುತ್ತಾ ಇಲ್ಲ. ಪೂರ್ಣವಾಗಿ ಕೆಟ್ಟು ಹೋಗಿವೆ. ಇದರ ಜೊತೆಗೆ ಫೀಡರ್ಸ್ ಚಾನಲ್ಸ್ ಕಿತ್ತು ಹೋಗಿ ಗದ್ದೆಗಳಲ್ಲಿ ಮರಳು ತುಂಬಿ ಬೆಳೆಗಳೆಲ್ಲಾ ಹಾಳಾಗಿ ಹೋಗಿದೆ. ಇಷ್ಟಾದರೂ ಕೂಡ ಅಂತಹವರಿಗೆ ಯಾವುದೇ ರಿಲೀಫ್‌ನ್ನು ಕೊಟ್ಟಿಲ್ಲ. ಇಂತಹ ಒಂದು ಕಷ್ಟ ಪರಿಸ್ಥಿತಿಯಲ್ಲಿ ಎಲ್ಲಿ ಮನೆಗಳು ಬಿದ್ದು ಹೋಗಿವೆ, ಅಂತಹವರಿಗೆ ಜನತಾ ಮನೆಗಳನ್ನಾದರೂ ಕೊಡಿಸಿ, ಅಥವಾ ಅವರಿಗೆ ಮನೆಕಟ್ಟಿಕೊಳ್ಳಲು ನೆರವು ಕೊಡಿ. ನಿಮ್ಮ ಹತ್ತಿರ ಹಣ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಏನಾದರೂ ವ್ಯವಸ್ಥೆ ಮಾಡಿಕೊಂಡು ಎಲ್ಲಿ ಬೆಳೆ ಕೆಟ್ಟು ಹೋಗಿವೆ, ಎಲ್ಲಿ ಬ್ರೀಚಸ್ ಆಗಿ ಮರಳು ತುಂಬಿ ಹಾನಿಯಾಗಿದೆ, ಎಲ್ಲಿ ಮನೆ ಬಿದ್ದು ಹೋಗಿವೆ, ಅಂತಹ ಕಡೆಗಳಲ್ಲಿ ಜನರಿಗೆ ತಕ್ಕಷ್ಟು ಪರಿಹಾರ ಕೊಡಿ. ಈಗ ನೀವು ನಿಗದಿ ಮಾಡಿ ಕೊಡುತ್ತಿರುವ ಪರಿಹಾರ ಬಹಳ ಹಿಂದಿನದು ಮತ್ತು ಬಹಳ ಕಡಿಮೆ ಪ್ರಮಾಣದ್ದು. ಆ ಪ್ರಕಾರ ನೀವು ೪,೮೦೦ ರೂ.ಗಳಿಗಿಂತ ಆದಾಯ ಕಡಿಮೆ ಇರುವವರಿಗೆ ಮಾತ್ರ ಇಂಥ ಸಂದರ್ಭಗಳಲ್ಲಿ ಪರಿಹಾರವನ್ನು ಕೊಡುವುದಕ್ಕೆ ಅನುವು ಮಾಡಿಕೊಟ್ಟಿದ್ದೀರಿ. ಮನೆ ಹೋದರೆ ೧,೨೦೦ ರೂ.ಗಳು ಮತ್ತು ವ್ಯಕ್ತಿ ಸತ್ತು ಹೋದರೆ ೧,೦೦೦ ಸಾವಿರ ರೂ.ಗಳು ಮತ್ತು ಐದು ವರ್ಷಗಳ ತನಕ ತಿಂಗಳಿಗೆ ೧೦೦ ರೂ. ಗಳಂತೆ ಪರಿಹಾರ ಕೊಡುತ್ತೀರಿ ಎಂದು ಕಾಣುತ್ತದೆ. ಇನ್ನು ತಾಲ್ಲೂಕು ಕಚೇರಿಯಲ್ಲಿ ನ್ಯಾಚುರಲ್ ಕಲಾಮಿಟೀಸ್‌ಗೆ ೮೦೦ ರೂ. ಗಳನ್ನು ಕೊಡುತ್ತಾರೆ. ಅಸಿಸ್ಟೆಂಟ್ ಕಮೀಷನರ್ ಕಚೇರಿಯಲ್ಲಿ, ಡಿ. ಸಿ. ಕಚೇರಿಯಲ್ಲಿ ಈ ಹಣವನ್ನು ಕೊಡುತ್ತಾರೆ. ಅದನ್ನು ತೆಗೆದುಕೊಳ್ಳಬೇಕಾದರೆ ೩೦೦ ರೂ. ಗಳಷ್ಟು ಹಣ ಖರ್ಚು ಆಗುತ್ತದೆ. ಹೀಗೆ ನೊಂದವರಿಗೆ ಪರಿಹಾರವನ್ನು ಕೊಡುವಾಗ ಅವನನ್ನು ತಿರುಗಿಸಿ, ತಿರುಗಿಸಿ, ಸುಸ್ತು ಮಾಡಿಸಿ ಕೊಡುತ್ತೀರಿ. ಅದನ್ನು ತ್ವರಿತವಾಗಿ ಕೊಡಿಸಲು ವ್ಯವಸ್ಥೆ ಮಾಡಿರಿ. ಹೀಗೆ ನೊಂದವರಿಗೆ ಮಾನವೀಯತೆಯ ದೃಷ್ಟಿಯಿಂದ ಸಹಾಯವನ್ನು ಮಾಡುವುದರಲ್ಲಿ ಹಿಂದೇಟು ಹಾಕಬಾರದು, ಇನ್ನು ಸ್ಕೂಲ್‌ಬಿಲ್ಡಿಂಗ್ ಬಗ್ಗೆ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ಸುಮಾರು ೩೦೦ ಶಾಲೆಗಳ ಕಟ್ಟಡಗಳು ಬಿದ್ದಿವೆ, ಕೆಟ್ಟಿವೆ. ಅಲ್ಲಿಯ ಮಕ್ಕಳಿಗೆ ಮರಗಳ ಕೆಳಗೆ ಪಾಠ ಮಾಡುತ್ತಾ ಇದ್ದಾರೆ. ಅಂತಹ ಕಡೆಗಳನ್ನು ಗುರುತಿಸಿ ಕೂಡಲೇ ಅವರಿಗೆ ಸಹಾಯ ಒದಗಿಸಿ ಕಟ್ಟಡಗಳನ್ನು ಸರಿಯಾಗಿ ಕಟ್ಟಿಸಿ ಕೊಡಿ. ಮತ್ತು ನೀವು ಕೊಡುವ ಸಹಾಯವು ಸಕಾಲದಲ್ಲಿ ಸಿಗುವ ಹಾಗೆ ಮಾಡಿ, ಅತಿವೃಷ್ಟಿಗೆಂದು ಕೊಡುವ ಸಹಾಯ ಅತಿವೃಷ್ಟಿ ಮುಗಿದು ಅನಾವೃಷ್ಟಿ ಬರುವಾಗ ಕೊಡಬೇಡಿ, ಸಕಾಲದಲ್ಲಿ ಕೊಡುವ ವ್ಯವಸ್ಥೆ ಮಾಡಿ, ಜನರಿಗೆ ಅನುಕೂಲವಾಗುವ ಹಾಗೆ ಮಾಡಿ ನೀವು ಹಣಕ್ಕಾಗಿ ಒಂದು ವರದಿಯನ್ನು ತಯಾರುಮಾಡಿ ಕೇಂದ್ರಸರಕಾರಕ್ಕೆ ಕಳುಹಿಸಿದ್ದೀವೆ ಎಂದು ಅವರು ಕೊಡುವ ಹಣಕ್ಕಾಗಿ ಕಾಯುವುದು ಬೇಡ. ಧೈರ್ಯವಾಗಿ ನಮ್ಮ ಕಾಂಗ್ರೆಸ್ ಮಿತ್ರರನ್ನು ಕರೆದುಕೊಂಡು ಹೋಗಿ ಅವರಿಗೆ ಪರಿಸ್ಥಿತಿಯನ್ನು ವಿವರಿಸಿ, ಅವರಿಂದ ನೆರವು ಪಡೆದುಕೊಂಡು ಬನ್ನಿ.